# ಕರ್ನಾಟಕ ಖಾದಿ ಮತ್ತು ಗ್ರಾಮೋದ್ಯೋಗಗಳ ಅಧಿನಿಯಮ, 1956

(ಕರ್ನಾಟಕ ರಾಜ್ಯಪತ್ರ, ಗುರುವಾರ, ಡಿಸೆಂಬರ್ 13, 2007, ಭಾಗ – IVಎ, 1394 ರಿಂದ 1414 ರ ವರೆಗಿನ ಪುಟಗಳಲ್ಲಿ ಪ್ರಕಟಿತವಾಗಿದೆ).

## ಪ್ರಕರಣಗಳ ಅನುಕ್ರಮಣಿಕೆ

**ಪ್ರಕರಣಗಳು:**


### ಅಧ್ಯಾಯ– I

1. ಸಂಕ್ಷಿಪ್ತ ಹೆಸರು, ವ್ಯಾಪ್ತಿ, ಪ್ರಾರಂಭ ಮತ್ತು ನಿರಸನ

2. ಪರಿಭಾಷೆಗಳು

### ಅಧ್ಯಾಯ – II

### ಮಂಡಳಿಯ ಸ್ಥಾಪನೆ ಮತ್ತು ರಚನೆ

3. ಮಂಡಳಿಯ ಸ್ಥಾಪನೆ

4. ಮಂಡಳಿಯ ರಚನೆ

5. ಮಂಡಳಿಗೆ ನೇಮಕ ಹೊಂದಲು ಅನರ್ಹತೆ

6. ಮಂಡಳಿಯ ಸರ್ಕಾರೇತರ ಸದಸ್ಯನನ್ನು ತೆಗೆದುಹಾಕುವುದು ಅಥವಾ ಅಮಾನತುಗೊಳಿಸುವುದು

7. ಸರ್ಕಾರೇತರ ಸದಸ್ಯನ ಖಾಲಿಸ್ಥಾನ

7ಎ. ಸಾಂದರ್ಭಿಕ ಖಾಲಿ ಸ್ಥಾನವನ್ನು ತುಂಬುವುದು

8. ವ್ಯವಹರಣೆಗಳು ಸರಿಯಾದವು ಮತ್ತು ಸಿಂಧುವಾದವುಗಳೆಂದು ಪೂರ್ವಭಾವನೆ ಮಾಡುವುದು

9. ಮಂಡಳಿಯ ಸಿಬ್ಬಂದಿ ಸದಸ್ಯರ ನೇಮಕ ಮತ್ತು ಅವರ ಸೇವಾ ಷರತ್ತುಗಳು

10. ಸಮಿತಿಗಳ ನೇಮಕ

11. ಮಂಡಳಿಯ ಸಭೆ

12. ಕರಾರುಗಳನ್ನು ಮಾಡಿಕೊಳ್ಳುವ ಅಧಿಕಾರ

### ಅಧ್ಯಾಯ – III

### ಮಂಡಳಿಯ ಪ್ರಕಾರ್ಯಗಳು ಮತ್ತು ಅಧಿಕಾರಗಳು

13. ಮಂಡಳಿಯ ಪ್ರಕಾರ್ಯಗಳು

14. ಮಂಡಳಿಯ ಸಾಮಾನ್ಯ ಅಧಿಕಾರಗಳು

### ಅಧ್ಯಾಯ - IV

### ಕಾರ್ಯಕ್ರಮಗಳನ್ನು ಸಿದ್ಧಪಡಿಸುವುದು ಮತ್ತು ಸಲ್ಲಿಸುವುದು

15. ವಾರ್ಷಿಕ ಕಾರ್ಯಕ್ರಮಗಳನ್ನು ಸಿದ್ಧಪಡಿಸುವುದು ಮತ್ತು ಸಲ್ಲಿಸುವುದು

16. ಕಾರ್ಯಕ್ರಮದ ಮಂಜೂರಾತಿ

17. ಪೂರಕ ಕಾರ್ಯಕ್ರಮ

## ಅಧ್ಯಾಯ - V

### ಹಣಕಾಸು, ಲೆಕ್ಕಪತ್ರಗಳು, ಲೆಕ್ಕಪರಿಶೋಧನೆ ಮತ್ತು ಋಣಗಳು

18. ಸ್ವತ್ತಿನ ವರ್ಗಾವಣೆ

19. ಮಂಡಳಿಯ ಸ್ಥಾಪನೆಗೆ ಮುಂಚೆ ಮಾಡಿದ ವೆಚ್ಚಗಳು ಮತ್ತು ಕರಾರುಗಳು

20. ಮಂಡಳಿಗೆ ಸಹಾಯಧನಗಳು ಮತ್ತು ಸಾಲಗಳು

21. ಮಂಡಳಿಯ ನಿಧಿಗಳು

22. ನಿಧಿ ಮತ್ತು ಸ್ವತ್ತಿನ ವಿನಿಯೋಗ

22ಎ. ಮಂಡಳಿಗೆ ಬರಬೇಕಾದ ಹಣವನ್ನು ಭೂ ಕಂದಾಯದ ಬಾಕಿಯಂತೆ ವಸೂಲಿ ಮಾಡುವುದು

23. ಆಯವ್ಯಯ

24. ಆಯವ್ಯಯ ಮಂಜೂರಾತಿ

25. ಪೂರಕ ಆಯವ್ಯಯ

26. ವಾರ್ಷಿಕ ವರದಿ

27. ಹೆಚ್ಚಿನ ವರದಿ, ಅಂಕಿ ಅಂಶಗಳು ಮತ್ತು ವಿವರಪಟ್ಟಿಕೆಗಳು

28. ಲೆಕ್ಕಪತ್ರಗಳು ಮತ್ತು ಲೆಕ್ಕಪರಿಶೋಧನೆ

## ಅಧ್ಯಾಯ–VI

### ಸಂಕೀರ್ಣ

29. ಮಂಡಳಿಯ ಸದಸ್ಯರು ಮತ್ತು ಮಂಡಳಿಯ ಸಿಬ್ಬಂದಿ ಸದಸ್ಯರು ಸರ್ಕಾರಿ ನೌಕರರಾಗಿರುವುದು

30. ಈ ಅಧಿನಿಯಮದ ಮೇರೆಗೆ ಕೈಗೊಂಡ ಕ್ರಮಕ್ಕೆ ರಕ್ಷಣೆ

30ಎ. ಮಂಡಳಿಯ ವಿಸರ್ಜನೆ

31. ನಿಯಮಗಳು

32. ವಿನಿಯಮನಗಳು

33. ಅನುಸೂಚಿಯ ತಿದ್ದುಪಡಿ

34. ಉಳಿಸುವಿಕೆ

35. ಬಿಟ್ಟುಬಿಡಲಾಗಿದೆ

ಅನುಸೂಚಿ.

## ಉದ್ದೇಶ ಮತ್ತು ಕಾರಣಗಳ ಹೇಳಿಕೆ

**I**

**1957ರ ಅಧಿನಿಯಮ 7.–** ಲಭ್ಯವಿಲ್ಲ.

**II**

**1958ರ ತಿದ್ದುಪಡಿ ಮಾಡುವ ಅಧಿನಿಯಮ 25.–** ಮೈಸೂರು ಖಾದಿ ಮತ್ತು ಗ್ರಾಮೋದ್ಯೋಗಗಳ ವಿಧೇಯಕವನ್ನು ವಿಧಾನ ಸಭೆಯಲ್ಲಿ ಮಂಡಿಸಿದ ಸಮಯದಲ್ಲಿ ಕೇಂದ್ರದಲ್ಲಿ ಅಖಿಲ ಭಾರತ ಖಾದಿ ಮತ್ತು ಗ್ರಾಮೋದ್ಯೋಗಗಳ ಮಂಡಳಿ ಎಂಬ ಹೆಸರಿನ ಸಂವಾದಿ ಮಂಡಳಿಯು ಅಸ್ತಿತ್ವದಲ್ಲಿತ್ತು. ಅಖಿಲ ಭಾರತ ಖಾದಿ ಮತ್ತು ಗ್ರಾಮೋದ್ಯೋಗಗಳ ಮಂಡಳಿಯನ್ನು ಒಂದು ಶಾಸನಬದ್ಧ ಸಂಸ್ಥೆಯನ್ನಾಗಿ ಮಾಡಿದಂದಿನಿಂದ ಅದನ್ನು ಖಾದಿ ಮತ್ತು ಗ್ರಾಮೋದ್ಯೋಗ ಆಯೋಗ ಎಂದು ಕರೆಯಲಾಗಿದೆ. ಮೈಸೂರು ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗಗಳ ಅಧಿನಿಯಮವು ಅಖಿಲ ಭಾರತ ಖಾದಿ ಮತ್ತು ಗ್ರಾಮೋದ್ಯೋಗಗಳ ಮಂಡಳಿಯ ಉಲ್ಲೇಖ ಮಾಡುವುದರಿಂದ, ರಾಜ್ಯ ಅಧಿನಿಯಮದಲ್ಲಿ 'ಅಖಿಲ ಭಾರತ ಖಾದಿ ಮತ್ತು ಗ್ರಾಮೋದ್ಯೋಗಗಳ ಮಂಡಳಿ' ಎಂಬ ಪದಾವಳಿಗಳು ಬರುವ ಕಡೆಗಳಲೆಲ್ಲಾ ಅವುಗಳಿಗೆ 'ಖಾದಿ ಮತ್ತು ಗ್ರಾಮೋದ್ಯೋಗಗಳ ಆಯೋಗ' ಎಂಬ ಪದಾವಳಿಗಳನ್ನು ಸೇರಿಸಲು ಅನುಕೂಲವಾಗುವಂತೆ ಅಧಿನಿಯಮದಲ್ಲಿ ಕೆಲವು ಶಾಬ್ದಿಕ ಬದಲಾವಣೆಗಳನ್ನು ಮಾಡುವುದು ಅವಶ್ಯಕವೆಂದು ಕಂಡುಬಂದಿದೆ.

ಆದ್ದರಿಂದ ಈ ವಿಧೇಯಕ.

(ಅಧಿಸೂಚನೆ ಸಂ. ಎಲ್ ಸಿ 272 ದಿನಾಂಕ 1ನೇ ಮೇ 1958, ಕಡತ ಸಂಖ್ಯೆ ಲಾ 2 ಎಲ್‌ಜಿಎನ್ 57 ಇದರಿಂದ ಪಡೆಯಲಾಗಿದೆ.)

**III**

**1973ರ ತಿದ್ದುಪಡಿಮಾಡುವ ಅಧಿನಿಯಮ 9.–** ಮುಂಬಯಿ ಖಾದಿ ಮತ್ತು ಗ್ರಾಮೋದ್ಯೋಗಗಳ ಮಂಡಳಿಯು, ಮೈಸೂರು ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗಗಳ ಮಂಡಳಿಯಲ್ಲಿನ ಭಾರತೀಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರಗಳ ಸೇವೆಯ ವೃಂದದಿಂದ ಒಬ್ಬ ಹಣಕಾಸು ಸಲಹೆಗಾರ ಮತ್ತು ಮುಖ್ಯ ಲೆಕ್ಕಪತ್ರಾಧಿಕಾರಿಯನ್ನು ನೇಮಕ ಮಾಡುವಂತೆ ರಾಜ್ಯ ಸರ್ಕಾರವನ್ನು ಕೋರುತ್ತಿದೆ. ಮಂಡಳಿಯ ಲೆಕ್ಕಪತ್ರಗಳ ಸೂಕ್ತ ನಿರ್ವಹಣೆಗಾಗಿ ಅಂಥ ಅಧಿಕಾರಿಯ ನೇಮಕಾತಿಯು ಅವಶ್ಯವಾಗಿದೆ. ಅನೇಕ ಇತರ ರಾಜ್ಯಗಳಲ್ಲಿ ಖಾದಿ ಮಂಡಳಿಗಳಲ್ಲಿ ಹಣಕಾಸು ಸಲಹೆಗಾರನನ್ನು ಮತ್ತು ಮುಖ್ಯ ಲೆಕ್ಕಪತ್ರಾಧಿಕಾರಿಯನ್ನು ನೇಮಕ ಮಾಡಲಾಗಿದೆ. ಮೈಸೂರು ಖಾದಿ ಮತ್ತು ಗ್ರಾಮೋದ್ಯೋಗಗಳ ಅಧಿನಿಯಮ, 1956ರ 9(2)ನೇ ಪ್ರಕರಣದ ಮೇರೆಗೆ, ರಾಜ್ಯ ಸರ್ಕಾರವು ತನ್ನ ಅಧಿಕಾರಿಗಳ ವರ್ಗದಿಂದ ಮಾತ್ರ ಲೆಕ್ಕಪತ್ರಾಧಿಕಾರಿಯನ್ನು ನೇಮಕ ಮಾಡಲು ಅವಕಾಶವಿದೆ. ಅಧಿನಿಯಮಕ್ಕೆ ಮಾಡಲು ಉದ್ದೇಶಿಸಿರುವ ತಿದ್ದುಪಡಿಯು ಕೇಂದ್ರ ಸರ್ಕಾರದ ಅಥವಾ ರಾಜ್ಯ ಸರ್ಕಾರದ ಅಧಿಕಾರಿಗಳ ವರ್ಗದಿಂದ ಒಬ್ಬ ಹಣಕಾಸು ಸಲಹೆಗಾರ ಮತ್ತು ಮುಖ್ಯ ಲೆಕ್ಕಪತ್ರಾಧಿಕಾರಿಯ ನೇಮಕಕ್ಕೆ ಅನುಕೂಲ ಕಲ್ಪಿಸುವುದಾಗಿದೆ. ಅಧಿನಿಯಮದ 9ನೇ ಮತ್ತು 31(2)ನೇ ಪ್ರಕರಣಗಳಿಗೆ ಸೂಕ್ತ ತಿದ್ದುಪಡಿಗಳನ್ನು ಮಾಡುವ ಮೂಲಕ ಇದಕ್ಕೆ ಅವಕಾಶ ಕಲ್ಪಿಸಲು ಪ್ರಸ್ತಾವಿಸಲಾಗಿದೆ.

2. ಖಾದಿ ಮತ್ತು ಗ್ರಾಮೋದ್ಯೋಗಗಳ ಆಯೋಗವು ರಾಜ್ಯ ಮಂಡಳಿಗೆ ಸಾಲಗಳನ್ನು ಮಂಜೂರು ಮಾಡುತ್ತದೆ. ಪ್ರತಿಯಾಗಿ ರಾಜ್ಯ ಮಂಡಳಿಯು ನೋಂದಾಯಿತ ಸಂಸ್ಥೆಗಳಿಗೆ ಹಣ ಒದಗಿಸುತ್ತದೆ. ಬಾಕಿಗಳನ್ನು ಭೂ ಕಂದಾಯದ ಬಾಕಿಗಳಂತೆ ವಸೂಲಿ ಮಾಡಲು ಅಧಿನಿಯಮದಲ್ಲಿ ಯಾವ ಅವಕಾಶವೂ ಇಲ್ಲ. ಮುಂಬಯಿ ಖಾದಿ ಮತ್ತು ಗ್ರಾಮೋದ್ಯೋಗಗಳ ಅಧಿನಿಯಮದಲ್ಲಿ ಮಾಡಿರುವಂತೆ ಈ ಉದ್ದೇಶಕ್ಕಾಗಿ ಅಧಿನಿಯಮದಲ್ಲಿ ಅವಕಾಶವನ್ನು ಕಲ್ಪಿಸುವಂತೆ ಆಯೋಗವು ಸಲಹೆ ನೀಡಿದೆ. ಈ ಅಧಿನಿಯಮಕ್ಕೆ ಹೊಸ 22ಎ ಪ್ರಕರಣವನ್ನು ಸೇರ್ಪಡೆ ಮಾಡುವ ಮೂಲಕ ಅವಕಾಶ ಕಲ್ಪಿಸಲು ಈ ವಿಧೇಯಕವು ಪ್ರಸ್ತಾವಿಸುತ್ತದೆ.

3. (i) ರಾಜ್ಯಗಳಲ್ಲಿ ಖಾದಿ ಮತ್ತು ಗ್ರಾಮೋದ್ಯೋಗಗಳ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಖಾದಿ ಮತ್ತು ಗ್ರಾಮೋದ್ಯೋಗಗಳ ಆಯೋಗವು ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗಗಳ ಮಂಡಳಿಗಳಿಗೆ ಅನುದಾನದ ಹಾಗೂ ಸಾಲಗಳ ರೂಪದಲ್ಲಿ ಹಣ ಒದಗಿಸುತ್ತದೆ. ರಾಜ್ಯ ಮಂಡಳಿಗಳು ರಾಜ್ಯ ವಿಧಾನ ಮಂಡಲದ ರಚನೆಗಳಾಗಿದ್ದು, ಅವು ರಾಜ್ಯ ಸರ್ಕಾರದ ಹೊಣೆಗಾರಿಕೆಯಲ್ಲಿರುತ್ತವೆ ಎಂಬ ಪ್ರಾಮಾಣಿಕ ನಂಬುಗೆಯಿಂದ ಈ ಮುಂಗಡಗಳನ್ನು ನೀಡಲಾಗುತ್ತದೆ ಮತ್ತು ಅದರಂತೆಯೇ ರಾಜ್ಯ ಸರ್ಕಾರಗಳ ಪೂರ್ಣ ಪ್ರಮಾಣದ ಹಣಕಾಸು ಬೆಂಬಲವಿದೆಯೆಂದು ಮತ್ತು ಆಯೋಗವು ರಾಜ್ಯ ಮಂಡಳಿಗಳಿಗೆ ನೀಡಲಾದ ಮುಂಗಡಗಳು ರಾಜ್ಯ ಸರ್ಕಾರಕ್ಕೆ ನೀಡಲಾದ ಮುಂಗಡಗಳಷ್ಟೇ ಭದ್ರತೆಯುಳ್ಳದ್ದಾಗಿವೆಯೆಂದು ಪರಿಗಣಿಸಲಾಗುತ್ತದೆ.

(ii) ಒರಿಸ್ಸಾ ಖಾದಿ ಮತ್ತು ಗ್ರಾಮೋದ್ಯೋಗಗಳ ಮಂಡಳಿಯ ಇತ್ತೀಚಿನ ವಿಸರ್ಜನೆಯಿಂದ ಉದ್ಭವಿಸಿದ ಸನ್ನಿವೇಶಗಳ ಪರಿಣಾಮವಾಗಿ, ಖಾದಿ ಮತ್ತು ಗ್ರಾಮೋದ್ಯೋಗಗಳ ಆಯೋಗವು ರಾಜ್ಯದಲ್ಲಿ ಖಾದಿ ಮತ್ತು ಗ್ರಾಮೋದ್ಯೋಗಗಳ ಅಭಿವೃದ್ಧಿಗಾಗಿ ಮೈಸೂರು ಮಂಡಳಿಗೆ ಮುಂಗಡವಾಗಿ ನೀಡಿದ ಹಣದ ಭದ್ರತೆಯನ್ನು ರಾಜ್ಯ ಸರ್ಕಾರವು ಖಚಿತಪಡಿಸಿಕೊಳ್ಳುವಂತೆ ಅಪೇಕ್ಷಿಸಿದೆ.

(iii) ಖಾದಿ ಮತ್ತು ಗ್ರಾಮೋದ್ಯೋಗಗಳ ಆಯೋಗವು ಸೇವಾ ಏಜೆನ್ಸಿಯಾಗಿದ್ದು ಅದು ರಾಜ್ಯದಲ್ಲಿ ಖಾದಿ ಮತ್ತು ವಿವಿಧ ಗ್ರಾಮೋದ್ಯೋಗಗಳನ್ನು ಅಭಿವೃದ್ಧಿಪಡಿಸುವಲ್ಲಿ ರಾಜ್ಯ ಮಂಡಳಿಗೆ ನೆರವು ನೀಡುತ್ತದೆ, ಆದ್ದರಿಂದ ಆಯೋಗವು ರಾಜ್ಯ ಮಂಡಳಿಗೆ ತಾನು ನೀಡುವ ಹಣವನ್ನು ರಾಜ್ಯದಲ್ಲಿನ ಕೈಗಾರಿಕೆಗಳ ನಿರಂತರ ಅಭಿವೃದ್ಧಿಗಾಗಿ ಸುನಿಶ್ಚಿತಗೊಳಿಸಬೇಕೆಂದು ಅಪೇಕ್ಷಿಸುತ್ತದೆ. ಈ ಉದ್ದೇಶಕ್ಕಾಗಿ ಪಶ್ಚಿಮ ಬಂಗಾಳ ಸರ್ಕಾರವು ಅದರ ಅಧಿನಿಯಮದಲ್ಲಿ ಸೂಕ್ತವಾದ ಉಪಬಂಧಗಳನ್ನು ಸೇರಿಸಲು ಇತ್ತೀಚೆಗೆ ತೀರ್ಮಾನಿಸಿದೆಯೆಂದೂ ಸಹ ಆಯೋಗವು ತಿಳಿಸಿದೆ.

(iv) ಈ ವಿಧೇಯಕವು ಮೈಸೂರು ಖಾದಿ ಮತ್ತು ಗ್ರಾಮೋದ್ಯೋಗಗಳ ಅಧಿನಿಯಮ, 1956ರಲ್ಲಿ ಹೊಸ 30ಎ ಪ್ರಕರಣವನ್ನು ಸೇರಿಸುವ ಮೂಲಕ, ಇದಕ್ಕೆ ಅವಕಾಶ ಕಲ್ಪಿಸಲು ಪ್ರಸ್ತಾವಿಸಿದೆ.

4. ಮೈಸೂರು ಖಾದಿ ಮತ್ತು ಗ್ರಾಮೋದ್ಯೋಗಗಳ ಅಧಿನಿಯಮ, 1956ರ ಮೇರೆಗೆ ರಚಿಸಿದ ನಿಯಮಗಳನ್ನು ವಿಧಾನ ಮಂಡಲದ ಮುಂದೆ ಮಂಡಿಸುವುದಕ್ಕಾಗಿ ಮೈಸೂರು ಖಾದಿ ಮತ್ತು ಗ್ರಾಮೋದ್ಯೋಗಗಳ ಅಧಿನಿಯಮ, 1956ಕ್ಕೆ ತಿದ್ದುಪಡಿ ಮಾಡಬಹುದೆಂದು ಅಧೀನ ಶಾಸನ ರಚನಾ ಸಮಿತಿಯು ತನ್ನ VIIನೇ ವರದಿಯಲ್ಲಿ ಶಿಫಾರಸು ಮಾಡಿದೆ. ನಿಯಮಗಳನ್ನು ರಾಜ್ಯ ವಿಧಾನ ಮಂಡಲದ ಪ್ರತಿಯೊಂದು ಸದನದ ಮುಂದೆ ಮಂಡಿಸಲು ಈಗಿರುವ ಅಧಿನಿಯಮದಲ್ಲಿ ಅಂಥ ಯಾವುದೇ ಉಪಬಂಧಗಳು ಇಲ್ಲ.

ಆಂಧ್ರಪ್ರದೇಶ, ತಮಿಳುನಾಡು ಮತ್ತು ಮುಂಬಯಿ ಖಾದಿ ಮತ್ತು ಗ್ರಾಮೋದ್ಯೋಗಗಳ ಅಧಿನಿಯಮಗಳಲ್ಲಿ, ಆ ಅಧಿನಿಯಮಗಳ ಮೇರೆಗೆ ರಚಿಸಿದ ನಿಯಮಗಳನ್ನು ಅವುಗಳ ರಾಜ್ಯ ವಿಧಾನ ಮಂಡಲಗಳ ಮುಂದೆ ಮಂಡಿಸಲು ಉಪಬಂಧ ಕಲ್ಪಿಸಲಾಗಿದೆ. ಅಲ್ಲದೆ, ಖಾದಿ ಮತ್ತು ಗ್ರಾಮೋದ್ಯೋಗಗಳ ಆಯೋಗ ಅಧಿನಿಯಮ, 1956 ರಲ್ಲಿ, ಆ ಅಧಿನಿಯಮದ ಮೇರೆಗೆ ಹೊರಡಿಸಲಾದ ಎಲ್ಲ ನಿಯಮಗಳನ್ನು ಸಂಸತ್ತಿನ ಉಭಯ ಸದನಗಳ ಮುಂದೆ ಮಂಡಿಸುವ ಬಗ್ಗೆ ಉಪಬಂಧವಿದೆ.

ಅಧಿನಿಯಮದ 31ನೇ ಪ್ರಕರಣದ (3)ನೇ ಉಪಪ್ರಕರಣವನ್ನು ಸೇರಿಸುವ ಮೂಲಕ ಮೈಸೂರು ಅಧಿನಿಯಮದಲ್ಲಿ ಅಂತಹುದೇ ಉಪಬಂಧ ಕಲ್ಪಿಸಲು ಪ್ರಸ್ತಾವಿಸಲಾಗಿದೆ.

(ದಿನಾಂಕ 19.10.1972 ರ ಕರ್ನಾಟಕ ರಾಜ್ಯಪತ್ರದ (ವಿಶೇಷ ಸಂಚಿಕೆ) ಭಾಗ IV- 2ಎ ಯಲ್ಲಿ ಸಂ. 415 ಎಂದು ಪುಟ 5 ಮತ್ತು 6 ರಲ್ಲಿ ಪ್ರಕಟಿಸಲಾಗಿದೆ).

## IV

**1978ರ ತಿದ್ದುಪಡಿ ಮಾಡುವ ಅಧಿನಿಯಮ 16.–** ಅಧಿನಿಯಮದಲ್ಲಿ, ಅಧ್ಯಕ್ಷರಿಗೆ ರಜೆ ಮಂಜೂರಾತಿಗಾಗಿ ಮತ್ತು ರಜೆಯ ಅವಧಿಯಲ್ಲಿ ಪ್ರಭಾರ ವ್ಯವಸ್ಥೆ ಮಾಡಲು ಯಾವ ಉಪಬಂಧವೂ ಇಲ್ಲ. ಇದಕ್ಕಾಗಿ ಉಪಬಂಧ ಕಲ್ಪಿಸುವುದು ಅವಶ್ಯವೆಂದು ಪರಿಗಣಿಸಲಾಗಿದೆ.

ಈಗಿರುವ ಉಪಬಂಧದ ಅನುಸಾರ, ರಾಜ್ಯ ಸರ್ಕಾರವು ಮಂಡಳಿಗೆ 15 ಸದಸ್ಯರವರೆಗೆ ನೇಮಕ ಮಾಡಬಹುದು; ಅದರಿಂದ ನಿಸ್ಸಂದೇಹವಾಗಿ ಗಾತ್ರ ಹೆಚ್ಚಾಗುತ್ತದೆ. ಗರಿಷ್ಠ ಸಂಖ್ಯೆಯನ್ನು ಒಂಬತ್ತಕ್ಕೆ ಪರಿಮಿತಗೊಳಿಸುವುದು ಅವಶ್ಯವೆಂದು ಪರಿಗಣಿಸಲಾಯಿತು.

ಅಧ್ಯಕ್ಷ ಮತ್ತು ಸದಸ್ಯರ ಪದಾವಧಿ ಮತ್ತು ಸೇವಾ ಷರತ್ತುಗಳನ್ನು ನಿಗದಿಪಡಿಸಲು ಅಧಿಕಾರ ಪಡೆದುಕೊಳ್ಳಲಾಗುತ್ತಿದೆ.

ಸಾಂದರ್ಭಿಕ ಖಾಲಿ ಸ್ಥಾನಗಳನ್ನು ಭರ್ತಿ ಮಾಡಲು ಮತ್ತು ಬ್ಯಾಂಕುಗಳಿಂದ ಸಾಲಗಳನ್ನು ಪಡೆಯಲು ಮಂಡಳಿಗೆ ಅಧಿಕಾರ ನೀಡುವ ಉಪಬಂಧಗಳನ್ನು ಕಲ್ಪಿಸಲಾಗಿದೆ.

ಕರ್ನಾಟಕ ವಿಧಾನ ಮಂಡಲವು ಅಧಿವೇಶನದಲ್ಲಿ ಇಲ್ಲದಿದ್ದುದರಿಂದ ಮತ್ತು ವಿಷಯವು ತುರ್ತು ಸ್ವರೂಪದ್ದಾಗಿದ್ದುದರಿಂದ ಒಂದು ಅಧ್ಯಾದೇಶವನ್ನು ಹೊರಡಿಸಲಾಯಿತು. ಈ ವಿಧೇಯಕವನ್ನು ಸದರಿ ಅಧ್ಯಾದೇಶದ ಬದಲಿಗೆ ಮಂಡಿಸಲಾಗಿದೆ.

(ಅಧಿಸೂಚನೆ ಎಲ್‌ಎ 14/1978 ಕಡತಸಂಖ್ಯೆ ಲಾ 23 ಎಲ್‌ಜಿಎನ್ 78 ರಿಂದ ತೆಗೆದುಕೊಳ್ಳಲಾಗಿದೆ.)

## V

**1983ರ ತಿದ್ದುಪಡಿ ಮಾಡುವ ಅಧಿನಿಯಮ 21.–** ಅವಶ್ಯ ನಿಯಮಗಳನ್ನು ಮಾಡುವ ಮೂಲಕ ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗಗಳ ಮಂಡಳಿಯ ನೌಕರರಿಗೆ ಪೂರ್ವಾನ್ವಯವಾಗಿ ಜಾರಿಗೆ ಬರುವಂತೆ ನಿವೃತ್ತಿ ವೇತನ ಸೌಲಭ್ಯಗಳನ್ನು ವಿಸ್ತರಿಸಲು ತೀರ್ಮಾನ ಕೈಗೊಳ್ಳಲಾಯಿತು. ಪೂರ್ವಾನ್ವಯವಾಗಿ ಜಾರಿಗೆ ಬರುವಂತೆ ನಿಯಮಗಳನ್ನು ರಚಿಸಲು ಸರ್ಕಾರಕ್ಕೆ ಅಧಿಕಾರವಿರುವ ಯಾವುದೇ ಉಪಬಂಧ ಅಧಿನಿಯಮದಲ್ಲಿ ಇಲ್ಲದ್ದರಿಂದ ಮತ್ತು ವಿಷಯವು

ತುರ್ತು ಸ್ವರೂಪದಾದ್ದರಿಂದ ಒಂದು ಅಧ್ಯಾದೇಶವನ್ನು ಹೊರಡಿಸಲಾಯಿತು. ಈ ವಿಧೇಯಕವನ್ನು ಸದರಿ ಅಧ್ಯಾದೇಶದ ಬದಲಿಗೆ ಮಂಡಿಸಲಾಗಿದೆ.

(ದಿನಾಂಕ 11.8.1983ರ ಕರ್ನಾಟಕ ರಾಜ್ಯಪತ್ರದ (ವಿಶೇಷ ಸಂಚಿಕೆ) ಭಾಗ IV -2ಎ ಯಲ್ಲಿ ಸಂ. 708 ಪುಟ 10 ರಲ್ಲಿ ಪ್ರಕಟಿಸಲಾಗಿದೆ.)

## VI

**1985ರ ತಿದ್ದುಪಡಿ ಮಾಡುವ ಅಧಿನಿಯಮ 8.–** ಕರ್ನಾಟಕ ಖಾದಿ ಮತ್ತು ಗ್ರಾಮೋದ್ಯೋಗಗಳ ಮಂಡಳಿಯು ಪ್ರಾರಂಭವಾದಂದಿನಿಂದಲೂ ಅದರ ಚಟುವಟಿಕೆಗಳು ಮತ್ತು ಹಣಕಾಸು ವ್ಯವಹಾರಗಳು ಏಕ ಪ್ರಕಾರವಾಗಿ ಹೆಚ್ಚಿವೆ. ಸರ್ಕಾರವು ಸಹಾಯ ಅನುದಾನಗಳ ಮೂಲಕ ಮಂಡಳಿಗೆ ಹೆಚ್ಚಿನ ಹಣವನ್ನು ನೀಡುತ್ತಿದೆ. ಮಂಡಳಿಯು ತನ್ನ ವಿಸ್ತೃತ ಚಟುವಟಿಕೆಗಳನ್ನು ನಿಭಾಯಿಸಲು ಮತ್ತು ರಾಜ್ಯದಲ್ಲಿ ಖಾದಿ ಮತ್ತು ಗ್ರಾಮೋದ್ಯೋಗಗಳನ್ನು ಪರಿಣಾಮಕಾರಿಯಾಗಿ ಸಂಘಟಿಸಲು, ಅಭಿವೃದ್ಧಿಪಡಿಸಲು ಮತ್ತು ನಿಯಂತ್ರಿಸಲು ಸಮರ್ಥವಾಗುವಂತೆ ಮಾಡುವ ದೃಷ್ಟಿಯಿಂದ ಮಂಡಳಿಯನ್ನು ಸೂಕ್ತ ರೀತಿಯಲ್ಲಿ ವಿಶಾಲ ತಳಹದಿಯ ಮೇಲೆ ರೂಪಿಸುವುದು ಮತ್ತು ಕರ್ನಾಟಕ ಖಾದಿ ಮತ್ತು ಗ್ರಾಮೋದ್ಯೋಗಗಳ ಅಧಿನಿಯಮ, 1956 ರಲ್ಲಿ ಅವಶ್ಯ ಬದಲಾವಣೆಗಳನ್ನು ಮಾಡುವ ಮೂಲಕ ಅದರ ರಚನೆ ಮತ್ತು ಸಂಘಟನೆಯಲ್ಲಿ ಇತರ ಬದಲಾವಣೆಗಳನ್ನು ತರುವುದು ಅವಶ್ಯವೆಂದು ಪರಿಗಣಿಸಲಾಗಿದೆ.

ವಿಷಯವು ತುರ್ತು ಹಾಗೂ ಪ್ರಾಮುಖ್ಯವುಳ್ಳದ್ದಾಗಿದ್ದುದರಿಂದ ಕರ್ನಾಟಕ ಖಾದಿ ಮತ್ತು ಗ್ರಾಮೋದ್ಯೋಗಗಳ (ತಿದ್ದುಪಡಿ) ಅಧ್ಯಾದೇಶ, 1985 (1985ರ ಅಧ್ಯಾದೇಶ ಸಂ 4) ನ್ನು ಹೊರಡಿಸಲಾಯಿತು.

ಈ ವಿಧೇಯಕವನ್ನು ಸದರಿ ಅಧ್ಯಾದೇಶದ ಬದಲಿಗೆ ಮಂಡಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

(ಅಧಿಸೂಚನೆ ಸಂಖ್ಯೆ. 15/1985 ಕಡತ ಸಂಖ್ಯೆ ಲಾ 16 ಎಲ್‌ಜಿಎನ್ 85 ಇದರಿಂದ ಪಡೆಯಲಾಗಿದೆ.)

## 1957ರ [1][ಕರ್ನಾಟಕ][1] ಅಧಿನಿಯಮ ಸಂಖ್ಯೆ 7

**(1957ರ ಫೆಬ್ರವರಿ ಇಪ್ಪತ್ತೆಂಟನೇ ದಿನದಂದು [1][ಕರ್ನಾಟಕ ರಾಜ್ಯಪತ್ರ][1] ದಲ್ಲಿ ಮೊದಲ ಬಾರಿಗೆ ಪ್ರಕಟಿಸಲಾಗಿದೆ.)**

# [1][ಕರ್ನಾಟಕ][1] ಖಾದಿ ಮತ್ತು ಗ್ರಾಮೋದ್ಯೋಗಗಳ ಅಧಿನಿಯಮ, 1956

**(1957ರ ಫೆಬ್ರವರಿ ಇಪ್ಪತ್ತೊಂದನೇ ದಿನದಂದು ರಾಷ್ಟ್ರಪತಿಯವರ ಸಮ್ಮತಿ ಪಡೆಯಲಾಗಿದೆ.)**

**(1958ರ 25, 1973ರ 9, 1978ರ 16, 1983ರ 21 ಮತ್ತು 1985ರ 8 – ಈ ಅಧಿನಿಯಮಗಳ ಮೂಲಕ ತಿದ್ದುಪಡಿಯಾದಂತೆ.)**

**[1][ಕರ್ನಾಟಕ ರಾಜ್ಯ][1] ದಲ್ಲಿ ಖಾದಿ ಮತ್ತು ಗ್ರಾಮೋದ್ಯೋಗಗಳನ್ನು ಸಂಘಟಿಸಲು, ಅಭಿವೃದ್ಧಿಪಡಿಸಲು ಮತ್ತು ನಿಯಂತ್ರಿಸಲು ಹಾಗೂ ಸದರಿ ಉದ್ದೇಶವನ್ನು ಈಡೇರಿಸುವುದಕ್ಕಾಗಿ ಒಂದು ಮಂಡಳಿಯನ್ನು ರಚಿಸಲು ಉಪಬಂಧ ಕಲ್ಪಿಸುವ ಅಧಿನಿಯಮ.**

[1][ಕರ್ನಾಟಕ ರಾಜ್ಯ][1] ದಲ್ಲಿ ಖಾದಿ ಮತ್ತು ಗ್ರಾಮೋದ್ಯೋಗಗಳನ್ನು ಸಂಘಟಿಸುವುದು, ಅಭಿವೃದ್ಧಿಪಡಿಸುವುದು ಮತ್ತು ನಿಯಂತ್ರಿಸುವುದು ಹಾಗೂ ಸದರಿ ಉದ್ದೇಶಗಳನ್ನು ಈಡೇರಿಸುವುದಕ್ಕಾಗಿ ಒಂದು ಮಂಡಳಿಯನ್ನು ರಚಿಸುವುದು ಅಗತ್ಯವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಏಳನೇ ವರ್ಷದಲ್ಲಿ [1][ಕರ್ನಾಟಕ ರಾಜ್ಯ][1] ವಿಧಾನ ಮಂಡಲದಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು:–

## ಅಧ್ಯಾಯ–I

**1. ಸಂಕ್ಷಿಪ್ತ ಹೆಸರು, ವ್ಯಾಪ್ತಿ, ಪ್ರಾರಂಭ ಮತ್ತು ನಿರಸನ.–** (1) ಈ ಅಧಿನಿಯಮವನ್ನು [1][ಕರ್ನಾಟಕ][1] ಖಾದಿ ಮತ್ತು ಗ್ರಾಮೋದ್ಯೋಗಗಳ ಅಧಿನಿಯಮ, 1956 ಎಂದು ಕರೆಯತಕ್ಕದ್ದು.

(2) ಇದು ಇಡೀ [1][ಕರ್ನಾಟಕ ರಾಜ್ಯ][1] ಕ್ಕೆ ವ್ಯಾಪ್ತವಾಗುತ್ತದೆ.

1. ಕರ್ನಾಟಕ ಕಾನೂನುಗಳ ಅಳವಡಿಕೆ ಆದೇಶ, 1973ರ ಮೂಲಕ 1.11.1973 ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

(3) ರಾಜ್ಯ ಸರ್ಕಾರವು [1][ಕರ್ನಾಟಕ ರಾಜ್ಯಪತ್ರ][1] ದಲ್ಲಿ ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದಂಥ [2][ದಿನಾಂಕಗಳಿಂದ][2] ಅಂಥ ಪ್ರದೇಶಗಳಲ್ಲಿ ಅದು ಜಾರಿಗೆ ಬರತಕ್ಕದ್ದು.

1. ಕರ್ನಾಟಕ ಕಾನೂನುಗಳ ಅಳವಡಿಕೆ ಆದೇಶ, 1973ರ ಮೂಲಕ 1.11.1973 ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.
2. ಈ ಅಧಿನಿಯಮವು ಬೆಳಗಾವಿ ಪ್ರದೇಶದಲ್ಲಿ 15.2.1959 ರಿಂದ, ಗುಲ್ಬರ್ಗಾ ಪ್ರದೇಶದಲ್ಲಿ 1.8.1959 ರಿಂದ ಮತ್ತು ರಾಜ್ಯದ ಉಳಿದೆಡೆಗಳಲ್ಲಿ 18.9.1957 ರಿಂದ ಜಾರಿಗೆ ಬಂದಿತು. ಅಧಿಸೂಚನೆಗಳ ಪಾಠವು ಅಧಿನಿಯಮದ ಕೊನೆಯ ಭಾಗದಲ್ಲಿದೆ.

(4) [1][ಬೆಳಗಾವಿ ಪ್ರದೇಶ][1] ದಲ್ಲಿ ಈ ಅಧಿನಿಯಮವು ಜಾರಿಗೆ ಬಂದ ಮೇಲೆ, ಬಾಂಬೆ ಗ್ರಾಮೋದ್ಯೋಗಗಳ ಅಧಿನಿಯಮ, 1954 (1954ರ ಬಾಂಬೆ ಅಧಿನಿಯಮ ಸಂಖ್ಯೆ XLI) ನಿರಸನಗೊಳ್ಳತಕ್ಕದ್ದು ಮತ್ತು [1][ಗುಲ್ಬರ್ಗ ಪ್ರದೇಶ][1]

ದಲ್ಲಿ ಈ ಅಧಿನಿಯಮವು ಜಾರಿಗೆ ಬಂದ ಮೇಲೆ, ಹೈದರಾಬಾದ್ ಖಾದಿ ಮತ್ತು ಗ್ರಾಮೋದ್ಯೋಗಗಳ ಅಧಿನಿಯಮ, 1955 (1955ರ ಹೈದ್ರಾಬಾದ್ ಅಧಿನಿಯಮ ಸಂಖ್ಯೆ X) ನಿರಸನಗೊಳ್ಳತಕ್ಕದ್ದು.

1. ಕರ್ನಾಟಕ ಕಾನೂನುಗಳ ಅಳವಡಿಕೆ ಆದೇಶ, 1973ರ ಮೂಲಕ 1.11.1973 ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

**2. ಪರಿಭಾಷೆಗಳು.–** ಈ ಅಧಿನಿಯಮದಲ್ಲಿ, ವಿಷಯಕ್ಕೆ ಅಥವಾ ಸಂದರ್ಭಕ್ಕೆ ವಿರುದ್ಧವಾದುದು ಏನಾದರೂ ಇದ್ದ ಹೊರತು,–

(i) "ಮಂಡಳಿ" ಎಂದರೆ 4ನೇ ಪ್ರಕರಣದ ಮೇರೆಗೆ ರಚಿಸಿದ [1][ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗಗಳ ಮಂಡಳಿ][1] ಎಂದು ಅರ್ಥ;

1. ಕರ್ನಾಟಕ ಕಾನೂನುಗಳ ಅಳವಡಿಕೆ ಆದೇಶ, 1973ರ ಮೂಲಕ 1.11.1973 ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

(ii) "ಖಾದಿ" ಎಂದರೆ ಭಾರತದಲ್ಲಿ ಕೈಯಿಂದ ನೂತ, ಹತ್ತಿ, ರೇಷ್ಮೆ ಅಥವಾ ಉಣ್ಣೆಯ ನೂಲಿನಿಂದ ಅಥವಾ ಯಾವುದೇ ಎರಡು ಅಥವಾ ಅಂತಹ ಎಲ್ಲ ಎಳೆಗಳ ಮಿಶ್ರಣದಿಂದ ಕೈಮಗ್ಗಗಳಲ್ಲಿ ನೇಯ್ದ ಯಾವುದೇ ಬಟ್ಟೆ ಎಂದು ಅರ್ಥ;

(iii) "ಗೊತ್ತುಪಡಿಸಲಾದುದು" ಎಂದರೆ ಈ ಅಧಿನಿಯಮದ ಮೇರೆಗೆ ಮಾಡಿದ ನಿಯಮಗಳಿಂದ ಗೊತ್ತುಪಡಿಸಲಾದುದು ಎಂದು ಅರ್ಥ;

(iv) "ವಿನಿಯಮನಗಳು" ಎಂದರೆ ಈ ಅಧಿನಿಯಮದ ಮೇರೆಗೆ ಮಾಡಿದ ವಿನಿಯಮನಗಳು ಎಂದು ಅರ್ಥ;

(v) "ಗ್ರಾಮೋದ್ಯೋಗ" ಎಂದರೆ ಖಾದಿ ಉದ್ದಿಮೆ ಮತ್ತು ಈ ಅಧಿನಿಯಮದ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿರುವ ಯಾವುದೇ ಉದ್ದಿಮೆ ಎಂದು ಅರ್ಥ.

## ಅಧ್ಯಾಯ II

## ಮಂಡಳಿಯ ಸ್ಥಾಪನೆ ಮತ್ತು ರಚನೆ

**3. ಮಂಡಳಿಯ ಸ್ಥಾಪನೆ.–** (1) ರಾಜ್ಯ ಸರ್ಕಾರವು [1][ಕರ್ನಾಟಕ ರಾಜ್ಯಪತ್ರ][1]ದಲ್ಲಿ ಅಧಿಸೂಚನೆಯ ಮೂಲಕ ಈ ಬಗ್ಗೆ ಗೊತ್ತುಪಡಿಸಬಹುದಾದಂಥ ದಿನಾಂಕದಿಂದ ಪರಿಣಾಮಕಾರಿಯಾಗುವಂತೆ ಈ ಅಧಿನಿಯಮದ ಉದ್ದೇಶಗಳಿಗಾಗಿ [1][ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗಗಳ ಮಂಡಳಿ][1] ಎಂಬ ಹೆಸರಿನಲ್ಲಿ ಒಂದು ಮಂಡಳಿಯನ್ನು ಸ್ಥಾಪಿಸತಕ್ಕದ್ದು.

1. ಕರ್ನಾಟಕ ಕಾನೂನುಗಳ ಅಳವಡಿಕೆ ಆದೇಶ, 1973ರ ಮೂಲಕ 1.11.1973 ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

(2) ಮಂಡಳಿಯು, ಶಾಶ್ವತ ಉತ್ತರಾಧಿಕಾರವನ್ನು ಮತ್ತು ಸಾಮಾನ್ಯ ಮೊಹರನ್ನು ಹೊಂದಿರುವ ನಿಗಮಿತ ನಿಕಾಯವಾಗಿರತಕ್ಕದ್ದು ಮತ್ತು ಸಂಸ್ಥೆಯ ಹೆಸರಿನಲ್ಲಿ ದಾವೆ ಹೂಡಬಹುದು ಮತ್ತು ದಾವೆಗೆ ಗುರಿಯಾಗಬಹುದು ಮತ್ತು ಚರ ಮತ್ತು ಸ್ಥಿರ ಸ್ವತ್ತುಗಳೆರಡನ್ನೂ ಆರ್ಜಿಸಲು ಮತ್ತು ಹೊಂದಲು ಮತ್ತು ಕರಾರು ಮಾಡಿಕೊಳ್ಳಲು ಮತ್ತು ಈ ಅಧಿನಿಯಮದ ಉದ್ದೇಶಗಳಿಗಾಗಿ ಅಗತ್ಯವಾದ ಎಲ್ಲವನ್ನು ಮಾಡಲು ಸಕ್ಷಮವಾಗಿರತಕ್ಕದ್ದು.

**4. ಮಂಡಳಿಯ ರಚನೆ.–** [1][(1) (ಎ) ಮಂಡಳಿಯು ಈ ಮುಂದಿನ ಸದಸ್ಯರನ್ನು ಒಳಗೊಂಡಿರತಕ್ಕದ್ದು, ಎಂದರೆ:–

(i) ರಾಜ್ಯ ಸರ್ಕಾರವು ನೇಮಕ ಮಾಡಿದ, ರಾಜ್ಯದ ಪ್ರತಿ ಜಿಲ್ಲೆಯಿಂದ ಒಬ್ಬ ವ್ಯಕ್ತಿ;

(ii) ಕೈಗಾರಿಕೆಗಳು ಮತ್ತು ವಾಣಿಜ್ಯ ನಿರ್ದೇಶನಾಲಯದ ಅಪರ ನಿರ್ದೇಶಕರು ಮತ್ತು ಪದನಿಮಿತ್ತ ಸಹಕಾರ ಸಂಘಗಳ ಅಪರ ರಿಜಿಸ್ಟ್ರಾರರು;

(iii) ರಾಜ್ಯ ಸರ್ಕಾರವು ನಾಮನಿರ್ದೇಶಿಸಿದ ಉಪಕಾರ್ಯದರ್ಶಿ ದರ್ಜೆಗಿಂತ ಕಡಿಮೆಯಲ್ಲದ ದರ್ಜೆಯ ಹಣಕಾಸು ಇಲಾಖೆಯ ಒಬ್ಬ ಅಧಿಕಾರಿ;

(iv) ರಾಜ್ಯ ಸರ್ಕಾರವು ನಾಮನಿರ್ದೇಶಿಸಿದ ಉಪಕಾರ್ಯದರ್ಶಿ ದರ್ಜೆಗಿಂತ ಕಡಿಮೆಯಲ್ಲದ ದರ್ಜೆಯ ವಾಣಿಜ್ಯ ಮತ್ತು ಕೈಗಾರಿಕೆಗಳ ಇಲಾಖೆಯ ಒಬ್ಬ ಅಧಿಕಾರಿ;

(v) ರಾಜ್ಯ ನಿರ್ದೇಶಕ, ಖಾದಿ ಮತ್ತು ಗ್ರಾಮೋದ್ಯೋಗಗಳ ಆಯೋಗ;

(vi) ಮಂಡಳಿಯ ಆರ್ಥಿಕ ಸಲಹೆಗಾರ ಮತ್ತು ಮುಖ್ಯ ಲೆಕ್ಕಪತ್ರಾಧಿಕಾರಿ; ಮತ್ತು

(vii) ಮಂಡಳಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ;

(ಬಿ) ಸದಸ್ಯರಲ್ಲಿ ಒಬ್ಬನನ್ನು ರಾಜ್ಯ ಸರ್ಕಾರವು ಮಂಡಳಿಯ ಅಧ್ಯಕ್ಷನನ್ನಾಗಿ ನೇಮಿಸತಕ್ಕದ್ದು.][1]

1. 1985ರ ಅಧಿನಿಯಮ 8ರ ಮೂಲಕ 1.6.1984 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(2) ಅಧ್ಯಕ್ಷನು ಅಥವಾ ಮಂಡಳಿಯ ಯಾವನೇ ಇತರ ಸದಸ್ಯನು ರಾಜ್ಯ ಸರ್ಕಾರಕ್ಕೆ ತನ್ನ ರಾಜೀನಾಮೆಯನ್ನು ಸಲ್ಲಿಸುವ ಮೂಲಕ ಯಾವುದೇ ಕಾಲದಲ್ಲಿ ತನ್ನ ಹುದ್ದೆಗೆ ರಾಜೀನಾಮೆ ನೀಡಬಹುದು:

ಪರಂತು, ರಾಜೀನಾಮೆಯು ಅಂಗೀಕಾರವಾಗುವವರೆಗೂ ಅದು ಪರಿಣಾಮಕಾರಿಯಾಗತಕ್ಕದ್ದಲ್ಲ.

(3) ಅಧ್ಯಕ್ಷ ಮತ್ತು ಇತರ ಸದಸ್ಯರು ಗೊತ್ತುಪಡಿಸಬಹುದಾದಂಥ ಭತ್ಯೆಗಳನ್ನು ಪಡೆಯತಕ್ಕದ್ದು ಮತ್ತು ಭತ್ಯೆಗಳನ್ನು ಮಂಡಳಿಯ ನಿಧಿಗಳಿಂದ ಸಂದಾಯ ಮಾಡತಕ್ಕದ್ದು.

[1][(4) ರಾಜ್ಯ ಸರ್ಕಾರದ ಇಷ್ಟಪರ್ಯಂತ ಮತ್ತು (4ಎ) ಉಪಪ್ರಕರಣಕ್ಕೆ ಒಳಪಟ್ಟು, ಮಂಡಳಿಯ ಅಧ್ಯಕ್ಷನ ಮತ್ತು ಇತರ ಸದಸ್ಯರ ಪದಾವಧಿ ಮತ್ತು ಸೇವೆಯ ನಿಬಂಧನೆಗಳು ಮತ್ತು ಷರತ್ತುಗಳು ಗೊತ್ತುಪಡಿಸಬಹುದಾದಂತೆ ಇರತಕ್ಕದ್ದು.

(4ಎ) ರಾಜ್ಯ ಸರ್ಕಾರವು ಕಾಲಕಾಲಕ್ಕೆ ಗೊತ್ತುಪಡಿಸಬಹುದಾದಂಥ ರಜೆಯನ್ನು ಅಧ್ಯಕ್ಷನಿಗೆ ಮಂಜೂರು ಮಾಡಬಹುದು ಮತ್ತು ಅಂಥ ರಜೆಯ ಅವಧಿಯಲ್ಲಿ ಅಧ್ಯಕ್ಷನ ಪರವಾಗಿ ಕಾರ್ಯನಿರ್ವಹಿಸಲು ಯಾವನೇ ಇತರ ಸದಸ್ಯನನ್ನು ನೇಮಿಸಬಹುದು ಮತ್ತು ಅಂಥ ಸದಸ್ಯನನ್ನು ಅವನು ಹಾಗೆ ಕಾರ್ಯನಿರ್ವಹಿಸುವಾಗ ಈ ಅಧಿನಿಯಮದ ಉದ್ದೇಶಗಳಿಗಾಗಿ ಅಧ್ಯಕ್ಷನೆಂದೇ ಭಾವಿಸತಕ್ಕದ್ದು.][1]

1. 1978ರ ಅಧಿನಿಯಮ 16ರ ಮೂಲಕ 11.5.1978 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(5) ಅಧ್ಯಕ್ಷನು ಮತ್ತು ಇತರ ಸದಸ್ಯರು ಮರುನೇಮಕಕ್ಕೆ ಅರ್ಹರಾಗಿರತಕ್ಕದ್ದು.

**5. ಮಂಡಳಿಗೆ ನೇಮಕ ಹೊಂದಲು ಅನರ್ಹತೆ.–** ಒಬ್ಬ ವ್ಯಕ್ತಿಯು, ಅವನು,–

(ಎ) ಖಾದಿ ಧರಿಸದಿದ್ದರೆ; ಅಥವಾ

(ಬಿ) ಮಂಡಳಿಯ ಅಧೀನದಲ್ಲಿನ ಯಾವುದೇ ಲಾಭದ ಹುದ್ದೆಯನ್ನು ಧಾರಣ ಮಾಡಿದ್ದರೆ; ಅಥವಾ

(ಸಿ) ಅಸ್ವಸ್ಥ ಮನಸ್ಸಿನವನಾಗಿದ್ದರೆ ಮತ್ತು ಹಾಗೆಂದು ಸಕ್ಷಮ ನ್ಯಾಯಾಲಯವು ಘೋಷಿಸಿದ್ದರೆ; ಅಥವಾ

(ಡಿ) ಅವಿಮುಕ್ತ ದಿವಾಳಿಯಾಗಿದ್ದರೆ ಅಥವಾ ದಿವಾಳಿಯೆಂದು ನ್ಯಾಯ ನಿರ್ಣೀತನಾಗಲು ಅರ್ಜಿ ಸಲ್ಲಿಸಿದ್ದರೆ; ಅಥವಾ

(ಇ) ರಾಜ್ಯ ಸರ್ಕಾರದ ಅಭಿಪ್ರಾಯದಲ್ಲಿ, ನೈತಿಕ ಅಧಃಪತನವನ್ನು ಒಳಗೊಳ್ಳುವ ಅಪರಾಧದ ಅಪರಾಧಿಯೆಂದು ನಿರ್ಣೀತನಾಗಿದ್ದರೆ; ಅಥವಾ

(ಎಫ್) ಮಂಡಳಿಯೊಂದಿಗೆ, ಅದರ ಮೂಲಕ ಅಥವಾ ಅದರ ಪರವಾಗಿ ಅಸ್ತಿತ್ವದಲ್ಲಿರುವ ಯಾವುದೇ ಕರಾರಿನಲ್ಲಿ ಮತ್ತು ಉದ್ಯೋಗದಲ್ಲಿ ಅವನು ಅಥವಾ ಆತನ ಪತ್ನಿಯ ಅಥವಾ ಮಗನ ಮೂಲಕ ಅಥವಾ ಯಾವನೇ ಪಾಲುದಾರನ ಮೂಲಕ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಯಾವುದೇ ಪಾಲನ್ನು ಅಥವಾ ಹಿತಾಸಕ್ತಿಯನ್ನು ಹೊಂದಿದ್ದರೆ; ಅಥವಾ

(ಜಿ) ಮಂಡಳಿಯೊಂದಿಗೆ ಅಥವಾ ಅದರ ಮೂಲಕ ಅಥವಾ ಅದರ ಪರವಾಗಿ ಯಾವುದೇ ಕರಾರಿನಲ್ಲಿ ಅಥವಾ ಉದ್ಯೋಗದಲ್ಲಿ ಯಾವುದೇ ಪಾಲನ್ನು ಅಥವಾ ಹಿತಾಸಕ್ತಿಯನ್ನು ಹೊಂದಿರುವ ಯಾವುದೇ ನಿಗಮಿತ ಕಂಪನಿಯ ಅಥವಾ ಯಾವುದೇ ಸಹಕಾರಿ ಸಂಘದ ಕಾರ್ಯದರ್ಶಿಯಾಗಿದ್ದರೆ ಅಥವಾ ವ್ಯವಸ್ಥಾಪಕನಾಗಿದ್ದರೆ ಅಥವಾ ಸಂಬಳ ಪಡೆಯುವ ಇತರ ಅಧಿಕಾರಿಯಾಗಿದ್ದರೆ

– ಮಂಡಳಿಯ [1][ಸರ್ಕಾರೇತರ ಸದಸ್ಯ][1] ನಾಗಿ ನೇಮಕಗೊಳ್ಳಲು ಅಥವಾ ಮುಂದುವರಿಯಲು ಅನರ್ಹನಾಗತಕ್ಕದ್ದು:

1. 1985ರ ಅಧಿನಿಯಮ 8ರ ಮೂಲಕ 1.6.1984 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

ಪರಂತು, ವ್ಯಕ್ತಿಯು,–

(i) ಯಾವ ವೃತ್ತ ಪತ್ರಿಕೆಯಲ್ಲಿ ಮಂಡಳಿಯ ಯಾವುದೇ ವ್ಯವಹಾರಗಳಿಗೆ ಸಂಬಂಧಿಸಿದಂತೆ ಯಾವುದೇ ಜಾಹಿರಾತನ್ನು ಸೇರಿಸಲಾಗಿದೆಯೋ ಆ ಯಾವುದೇ ವೃತ್ತ ಪತ್ರಿಕೆಯಲ್ಲಿ ಷೇರನ್ನು ಅಥವಾ ಹಿತಾಸಕ್ತಿಯನ್ನು ಹೊಂದಿರುವ ನಿಗಮಿತ ಕಂಪನಿ ಅಥವಾ ಸಹಕಾರಿ ಸಂಘದ ಕಾರ್ಯದರ್ಶಿ, ವ್ಯವಸ್ಥಾಪಕ ಅಥವಾ ಇತರ ಸಂಬಳ ಪಡೆಯುವ ಅಧಿಕಾರಿಯಾಗಿರುವ ಅವನು; ಅಥವಾ

(ii) ಅವನು ರಾಜ್ಯ ಸರ್ಕಾರಕ್ಕೆ ಕಾಲಕಾಲಕ್ಕೆ ತಾನು ಹೊಂದಿದ ಷೇರಿನ ಸ್ವರೂಪ ಮತ್ತು ವ್ಯಾಪ್ತಿಯನ್ನು ತಿಳಿಸಿದರೆ ಅಂಥ ಕಂಪನಿ ಅಥವಾ ಸಂಘದ ಷೇರುದಾರನಾಗಿರುವ ಕಾರಣ ಮಾತ್ರದಿಂದಲೇ ಅವನು ಆ (ಎಫ್) ಮತ್ತು (ಜಿ) ಖಂಡಗಳ ಅಡಿಯಲ್ಲಿ ಅನರ್ಹನಾಗತಕ್ಕದಲ್ಲ ಅಥವಾ ಮಂಡಳಿಯೊಂದಿಗೆ, ಮಂಡಳಿಯ ಮೂಲಕ ಅಥವಾ ಅದರ ಪರವಾಗಿ ಯಾವುದೇ ಕರಾರು ಅಥವಾ ನಿಯೋಜನೆಯಲ್ಲಿ ಯಾವುದೇ ಷೇರು ಅಥವಾ ಹಿತಾಸಕ್ತಿಯನ್ನು ಹೊಂದಿರುವುದಾಗಿ ಭಾವಿಸತಕ್ಕದ್ದಲ್ಲ.

**6. ಮಂಡಳಿಯ [1][ಸರ್ಕಾರೇತರ ಸದಸ್ಯ][1]ನನ್ನು ತೆಗೆದುಹಾಕುವುದು ಅಥವಾ ಅಮಾನತು ಗೊಳಿಸುವುದು.–** (1) ರಾಜ್ಯ ಸರ್ಕಾರವು, ಅಗತ್ಯ ವಿಚಾರಣೆಯ ನಂತರ, ಅಧ್ಯಕ್ಷನನ್ನು ಅಥವಾ ಯಾವನೇ ಇತರ [1][ಸರ್ಕಾರೇತರ ಸದಸ್ಯ][1] ನನ್ನು, ಅವನು,–

1. 1985ರ ಅಧಿನಿಯಮ 8ರ ಮೂಲಕ 1.6.1984 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(ಎ) ಕಾರ್ಯನಿರ್ವಹಿಸಲು ನಿರಾಕರಿಸಿದರೆ; ಅಥವಾ

(ಬಿ) ಕಾರ್ಯನಿರ್ವಹಿಸಲು ಅಸಮರ್ಥನಾದರೆ; ಅಥವಾ

(ಸಿ) ಮಂಡಳಿಯಲ್ಲಿ ಅವನ ಮುಂದುವರಿಕೆಯಿಂದ ಅದರ ಹಿತಾಸಕ್ತಿಗೆ ಬಾಧಕವಾಗುವಂತೆ ಅವನು ಮಂಡಳಿಯಲ್ಲಿ ತನ್ನ ಸ್ಥಾನವನ್ನು ದುರುಪಯೋಗಪಡಿಸಿಕೊಂಡರೆ; ಅಥವಾ

(ಡಿ) ರಾಜ್ಯ ಸರ್ಕಾರದ ಅಭಿಪ್ರಾಯದಲ್ಲಿ ಸಮರ್ಥನೀಯವೆನಿಸುವ ಕಾರಣಗಳಿಲ್ಲದೆ ಮಂಡಳಿಯ ಕ್ರಮಾನುಗತ ಮೂರು ಸಭೆಗಳಿಗೆ ಹಾಜರಾಗಲು ವಿಫಲನಾದರೆ; ಅಥವಾ

(ಇ) [1][ಕರ್ನಾಟಕ ರಾಜ್ಯ][1] ದಲ್ಲಿ ವಾಸಿಸುವುದು ಮುಕ್ತಾಯವಾದರೆ; ಅಥವಾ

1. ಕರ್ನಾಟಕ ಕಾನೂನುಗಳ ಅಳವಡಿಕೆ ಆದೇಶ, 1973ರ ಮೂಲಕ 1.11.1973 ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

(ಎಫ್) ತನ್ನ ನೇಮಕವಾದಂದಿನಿಂದ 5ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಅನರ್ಹತೆಗಳಿಗೆ ಗುರಿಯಾಗಿದ್ದರೆ; ಅಥವಾ

(ಜಿ) ಮಂಡಳಿಯಲ್ಲಿ ಮುಂದುವರಿಯಲು ಅನ್ಯಥಾ ಸೂಕ್ತನಾಗಿಲ್ಲದಿದ್ದರೆ

– ಆ ಹುದ್ದೆಯಿಂದ ತೆಗೆದುಹಾಕಬಹುದು.

(2) ಸಂಬಂಧಪಟ್ಟ [1][ಸರ್ಕಾರೇತರ ಸದಸ್ಯ][1] ನಿಗೆ ರಾಜ್ಯ ಸರ್ಕಾರಕ್ಕೆ ಆತನ ವಿವರಣೆಯನ್ನು ಸಲ್ಲಿಸಲು ಅವಕಾಶವನ್ನು ನೀಡಿದ ಹೊರತು (1)ನೇ ಉಪ ಪ್ರಕರಣದ ಮೇರೆಗೆ ತೆಗೆದುಹಾಕುವ ಯಾವುದೇ ಆದೇಶವನ್ನು ಮಾಡತಕ್ಕದ್ದಲ್ಲ:

1. 1985ರ ಅಧಿನಿಯಮ 8ರ ಮೂಲಕ 1.6.1984 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

ಪರಂತು, ರಾಜ್ಯ ಸರ್ಕಾರವು ಒಬ್ಬ [1][ಸರ್ಕಾರೇತರ ಸದಸ್ಯ][1] ನನ್ನು ಅವನ ವಿರುದ್ಧದ ವಿಚಾರಣೆಯನ್ನು ಇತ್ಯರ್ಥದಲ್ಲಿರಿಸಿ ಅಮಾನತುಗೊಳಿಸಬಹುದು.

1. 1985ರ ಅಧಿನಿಯಮ 8ರ ಮೂಲಕ 1.6.1984 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(3) (1)ನೇ ಉಪಪ್ರಕರಣದ (ಸಿ) ಅಥವಾ (ಎಫ್) ಖಂಡದ ಮೇರೆಗೆ ತೆಗೆದುಹಾಕಲಾದ ಒಬ್ಬ [1][ಸರ್ಕಾರೇತರ ಸದಸ್ಯ][1] ನು ಮಂಡಳಿಗೆ [1][ಸರ್ಕಾರೇತರ ಸದಸ್ಯ][1] ಸ್ಥಾನಕ್ಕೆ ಅಥವಾ ಇತರ ಯಾವುದೇ ಸ್ಥಾನಕ್ಕೆ ನೇಮಕಗೊಳ್ಳಲು ಅರ್ಹನಾಗಿರತಕ್ಕದ್ದಲ್ಲ.

1. 1985ರ ಅಧಿನಿಯಮ 8ರ ಮೂಲಕ 1.6.1984 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

**7. [1][ಸರ್ಕಾರೇತರ ಸದಸ್ಯ][1] ನ ಖಾಲಿಸ್ಥಾನ.–** ಒಬ್ಬ [1][ಸರ್ಕಾರೇತರ ಸದಸ್ಯ][1]ನು ತನ್ನ ರಾಜೀನಾಮೆಯನ್ನು ಲಿಖಿತದಲ್ಲಿ ರಾಜ್ಯ ಸರ್ಕಾರಕ್ಕೆ ನೀಡಿದರೆ ಮತ್ತು ರಾಜ್ಯ ಸರ್ಕಾರವು ಅದನ್ನು ಒಪ್ಪಿದರೆ, ಹಾಗೆ ಒಪ್ಪಿಕೊಂಡಂಥ ದಿನಾಂಕದಿಂದ ಅವನು [1][ಸರ್ಕಾರೇತರ ಸದಸ್ಯ][1] ನಾಗಿರುವುದು ನಿಂತುಹೋಗತಕ್ಕದ್ದು.

1. 1985ರ ಅಧಿನಿಯಮ 8ರ ಮೂಲಕ 1.6.1984 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[1][**7ಎ. ಸಾಂದರ್ಭಿಕ ಖಾಲಿ ಸ್ಥಾನವನ್ನು ತುಂಬುವುದು.–** [2][ಸರ್ಕಾರೇತರ ಸದಸ್ಯ][2] ನಾಗಿ ನೇಮಕಗೊಂಡ ವ್ಯಕ್ತಿಯ ವಜಾ, ರಾಜೀನಾಮೆ, ಮರಣ ಅಥವಾ ಬೇರೆ ಕಾರಣಗಳಿಂದಾಗಿ ಒಂದು ಸ್ಥಾನ ಖಾಲಿಯಾದಲ್ಲಿ, ಆ ಖಾಲಿ ಸ್ಥಾನವನ್ನು ರಾಜ್ಯ ಸರ್ಕಾರವು ಒಬ್ಬ ಹೊಸ [2][ಸರ್ಕಾರೇತರ ಸದಸ್ಯ][2] ನನ್ನು ನೇಮಕ ಮಾಡುವ ಮೂಲಕ ತುಂಬತಕ್ಕದ್ದು ಮತ್ತು ಹಾಗೆ ನೇಮಕಗೊಂಡ ವ್ಯಕ್ತಿಯು ತಾನು ಯಾವ [2][ಸರ್ಕಾರೇತರ ಸದಸ್ಯ][2]ನ ಸ್ಥಾನದಲ್ಲಿ ನೇಮಕಗೊಂಡಿರುತ್ತಾನೋ ಆ ಸದಸ್ಯನ ಉಳಿದ ಅವಧಿಯವರೆಗೆ ಆ ಹುದ್ದೆಯನ್ನು ಹೊಂದಿರತಕ್ಕದ್ದು.][1]

1. 1978ರ ಅಧಿನಿಯಮ 16ರ ಮೂಲಕ 11.5.1978 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

2. 1985ರ ಅಧಿನಿಯಮ 8ರ ಮೂಲಕ 1.6.1984 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

**8. ವ್ಯವಹರಣೆಗಳು ಸರಿಯಾದವು ಮತ್ತು ಸಿಂಧುವಾದವುಗಳೆಂದು ಪೂರ್ವಭಾವನೆ ಮಾಡುವುದು.–** ಮಂಡಳಿಯ ಯಾವುದೇ ಕಾರ್ಯವನ್ನು ಅಥವಾ ವ್ಯವಹರಣೆಯನ್ನು ಕೇವಲ ರಾಜೀನಾಮೆಯ, ಮರಣದ ಅಥವಾ ವಜಾ ಮಾಡಿದ ಕಾರಣದಿಂದಾಗಿ ಅದರ ಸದಸ್ಯತ್ವದಲ್ಲಿ ಉಂಟಾದ ಯಾವುದೇ ಸ್ಥಾನ ಖಾಲಿಯಾದ ಕಾರಣದಿಂದ ಅಸಿಂಧುಗೊಳಿಸತಕ್ಕದ್ದಲ್ಲ.

**9. ಮಂಡಳಿಯ ಸಿಬ್ಬಂದಿ ಸದಸ್ಯರ ನೇಮಕ ಮತ್ತು ಅವರ ಸೇವಾ ಷರತ್ತುಗಳು.–** (1) ರಾಜ್ಯ ಸರ್ಕಾರವು, [1][ಜಿಲ್ಲೆಯ ಜಿಲ್ಲಾಧಿಕಾರಿ ದರ್ಜೆಗಿಂತ ಕಡಿಮೆಯಲ್ಲದ ದರ್ಜೆಯ ಒಬ್ಬ ಅಧಿಕಾರಿಯನ್ನು ಮಂಡಳಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಯಾಗಿ ನೇಮಿಸತಕ್ಕದ್ದು.][1]

1. 1985ರ ಅಧಿನಿಯಮ 8ರ ಮೂಲಕ 1.6.1984 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[1][(2) ರಾಜ್ಯ ಸರ್ಕಾರವು, ಕೇಂದ್ರ ಸರ್ಕಾರದ ಅಥವಾ ರಾಜ್ಯ ಸರ್ಕಾರದ ಅಧಿಕಾರಿಗಳ ವರ್ಗದಿಂದ ಮಂಡಳಿಗೆ ಒಬ್ಬ ಹಣಕಾಸು ಸಲಹೆಗಾರ ಮತ್ತು ಮುಖ್ಯ ಲೆಕ್ಕಪತ್ರಾಧಿಕಾರಿಯನ್ನು ನೇಮಕ ಮಾಡತಕ್ಕದ್ದು. [2][XXX][2]][1].

1. 1973ರ ಅಧಿನಿಯಮ 9ರ ಮೂಲಕ 8.5.1973 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

2. 1985ರ ಅಧಿನಿಯಮ 8ರ ಮೂಲಕ 1.6.1984 ರಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ.

(3) [1][ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿಯ ಮತ್ತು ಹಣಕಾಸು ಸಲಹೆಗಾರನ ಮತ್ತು ಮುಖ್ಯ ಲೆಕ್ಕಪತ್ರಾಧಿಕಾರಿಯ][1] ಸಂಭಾವನೆ, ಭತ್ಯೆಗಳು ಮತ್ತು ಸೇವಾ ಷರತ್ತುಗಳು ರಾಜ್ಯ ಸರ್ಕಾರವು ನಿರ್ದಿಷ್ಟಪಡಿಸಬಹುದಾದಂಥ ರೀತಿಯಲ್ಲಿರತಕ್ಕದ್ದು, ಮತ್ತು ಅವರ ಸಂಭಾವನೆ ಮತ್ತು ಭತ್ಯೆಗಳನ್ನು ಮಂಡಳಿಯ ನಿಧಿಗಳಿಂದ ಸಂದಾಯ ಮಾಡತಕ್ಕದ್ದು.

1. 1985ರ ಅಧಿನಿಯಮ 8ರ ಮೂಲಕ 1.6.1984 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(4) ಗೊತ್ತುಪಡಿಸಬಹುದಾದಂಥ ನಿಯಮಗಳಿಗೆ ಒಳಪಟ್ಟು, ಮಂಡಳಿಯು ತಾನು ಅಗತ್ಯವೆಂದು ಪರಿಗಣಿಸಬಹುದಾದಂಥ ಸಿಬ್ಬಂದಿ ವರ್ಗದ ಸದಸ್ಯರನ್ನು ನೇಮಕ ಮಾಡಬಹುದು.

(5) ಮಂಡಳಿಯ ಸಿಬ್ಬಂದಿ ವರ್ಗದ ಸದಸ್ಯರ ಸಂಭಾವನೆ, ಭತ್ಯೆಗಳು ಮತ್ತು ಇತರ ಸೇವಾ ಷರತ್ತುಗಳು ಗೊತ್ತುಪಡಿಸಬಹುದಾದಂತೆ ಇರತಕ್ಕದ್ದು.

**10. ಸಮಿತಿಗಳ ನೇಮಕ.–** 31ನೇ ಪ್ರಕರಣದ ಮೇರೆಗೆ ಮಾಡಿದ ಯಾವುವೇ ನಿಯಮಗಳಿಗೆ ಒಳಪಟ್ಟು, ಮಂಡಳಿಯು ತನ್ನ ಕಾರ್ಯಗಳನ್ನು ಸಮರ್ಥವಾಗಿ ನಿರ್ವಹಿಸುವ ಉದ್ದೇಶಗಳಿಗಾಗಿ ಮತ್ತು ವಿಶೇಷವಾಗಿ ಸದರಿ ಪ್ರಕಾರ್ಯಗಳನ್ನು ಯಾವುದೇ ನಿರ್ದಿಷ್ಟ ಗ್ರಾಮೋದ್ಯೋಗದ ಪರಿಸ್ಥಿತಿಗಳಿಗೆ ಮತ್ತು ಅಗತ್ಯತೆಗಳಿಗೆ ಸೂಕ್ತ ಗಮನ ನೀಡುವುದರೊಂದಿಗೆ ಕಾರ್ಯಗತಗೊಳಿಸಲಾಗುತ್ತಿದೆ ಎಂಬುದನ್ನು ಸುನಿಶ್ಚಿತಗೊಳಿಸಿಕೊಳ್ಳುವ ಉದ್ದೇಶಕ್ಕಾಗಿ ಕಾಲಕಾಲಕ್ಕೆ ಒಂದು ಅಥವಾ ಹೆಚ್ಚಿನ ಸಮಿತಿಗಳನ್ನು ನೇಮಕ ಮಾಡಬಹುದು. ಅಂಥ ಸಮಿತಿಗಳನ್ನು ಯಾವುದೇ ನಿರ್ದಿಷ್ಟ ಪ್ರದೇಶಕ್ಕಾಗಿ ನೇಮಕ ಮಾಡಬಹುದು.

**11. ಮಂಡಳಿಯ ಸಭೆ.–** ಮಂಡಳಿಯು ಸಭೆ ಸೇರತಕ್ಕದ್ದು ಮತ್ತು ಅದು ಸೂಕ್ತವೆಂದು ಭಾವಿಸುವಂತೆ ಅದರ ಸಭೆಗಳ ದಿನಾಂಕಕ್ಕೆ, ಸಮಯಕ್ಕೆ, ನೋಟೀಸಿಗೆ, ವ್ಯವಸ್ಥಾಪನೆಗೆ ಮತ್ತು ಮುಂದೂಡುವಿಕೆಗಳಿಗೆ ಸಂಬಂಧಿಸಿದಂತೆ ಕಾಲಕಾಲಕ್ಕೆ ವ್ಯವಸ್ಥೆಯನ್ನು ಮಾಡತಕ್ಕದ್ದು. ಅಂಥ ಸಭೆಗಳನ್ನು ಪ್ರತಿ ಎರಡು ತಿಂಗಳುಗಳಲ್ಲಿ ಕೊನೇಪಕ್ಷ ಒಂದು ಬಾರಿಯಾದರೂ ನಡೆಸತಕ್ಕದ್ದು.

**12. ಕರಾರುಗಳನ್ನು ಮಾಡಿಕೊಳ್ಳಲು ಅಧಿಕಾರ.–** (1) ಮಂಡಳಿಯು, ಈ ಅಧಿನಿಯಮದ ಯಾವುವೇ ಉದ್ದೇಶಗಳನ್ನು ನೆರವೇರಿಸಲು ಅಗತ್ಯವೆಂದು ಅಥವಾ ವಿಹಿತವೆಂದು ತಾನು ಪರಿಗಣಿಸಬಹುದಾದಂಥ ಎಲ್ಲಾ ಕರಾರುಗಳನ್ನು ಮಾಡಿಕೊಳ್ಳಬಹುದು ಮತ್ತು ಪಾಲಿಸಬಹುದು ಮತ್ತು ಪ್ರತಿಯೊಂದು ಕರಾರನ್ನು ಮಂಡಳಿಯ ಪರವಾಗಿ ಅಧ್ಯಕ್ಷನು ಮಾಡಿಕೊಳ್ಳತಕ್ಕದ್ದು:

ಪರಂತು,–

(ಎ) ಒಂದು ಲಕ್ಷ ರೂಪಾಯಿಗಳು ಮತ್ತು ಅದಕ್ಕೂ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವ ಕರಾರನ್ನು ರಾಜ್ಯ ಸರ್ಕಾರದ ಪೂರ್ವ ಮಂಜೂರಾತಿಯಿಲ್ಲದೆ ಮಾಡಿಕೊಳ್ಳತಕ್ಕದ್ದಲ್ಲ;

(ಬಿ) (i) ಮಂಡಳಿಯ ಪೂರ್ವ ಮಂಜೂರಾತಿಯಿಲ್ಲದೆ (ಎ) ಖಂಡಕ್ಕೆ ಒಳಪಟ್ಟು, ಹತ್ತು ಸಾವಿರ ರೂಪಾಯಿಗಳು ಮತ್ತು ಅದಕ್ಕೂ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವ ಕರಾರನ್ನು ಮಾಡಿಕೊಳ್ಳತಕ್ಕದ್ದಲ್ಲ;

(ii) ಮಂಡಳಿಯ ಪೂರ್ವ ಮಂಜೂರಾತಿಯಿಲ್ಲದೆ (ಎ) ಖಂಡಕ್ಕೆ ಒಳಪಟ್ಟು, ಹತ್ತು ಸಾವಿರ ರೂಪಾಯಿಗಳು ಮತ್ತು ಅದಕ್ಕೂ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವ ಅಂದಾಜನ್ನು ಅಥವಾ ಟೆಂಡರನ್ನು ಮಂಜೂರು ಮಾಡತಕ್ಕದ್ದಲ್ಲ ಅಥವಾ ಅಂಗೀಕರಿಸತಕ್ಕದ್ದಲ್ಲ.

(2) ಈ ಪ್ರಕರಣದ ಉಪಬಂಧಗಳಿಗೆ ಒಳಪಟ್ಟು, ಮಂಡಳಿಯ ಪರವಾಗಿ ಅಧ್ಯಕ್ಷನು ಮಾಡಿಕೊಳ್ಳುವ ಪ್ರತಿಯೊಂದು ಕರಾರನ್ನು ಗೊತ್ತುಪಡಿಸಬಹುದಾದಂಥ ರೀತಿಯಲ್ಲಿ ಮತ್ತು ರೂಪದಲ್ಲಿ ಮಾಡಿಕೊಳ್ಳತಕ್ಕದ್ದು.

(3) ಈ ಪ್ರಕರಣದಲ್ಲಿ ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳಲ್ಲಿ ಉಪಬಂಧಿಸಿದ ರೀತಿಯಲ್ಲಿ ಮಾಡಿಕೊಳ್ಳದ ಯಾವುದೇ ಕರಾರು ಮಂಡಳಿಗೆ ಬಂಧನಕಾರಿಯಾಗಿರತಕ್ಕದ್ದಲ್ಲ.

## ಅಧ್ಯಾಯ III

### ಮಂಡಳಿಯ ಪ್ರಕಾರ್ಯಗಳು ಮತ್ತು ಅಧಿಕಾರಗಳು

**13. ಮಂಡಳಿಯ ಪ್ರಕಾರ್ಯಗಳು.–** (1) ಗ್ರಾಮೋದ್ಯೋಗಗಳನ್ನು ಸಂಘಟಿಸುವುದು, ಅಭಿವೃದ್ಧಿಪಡಿಸುವುದು ಮತ್ತು ನಿಯಂತ್ರಿಸುವುದು ಮತ್ತು ರಾಜ್ಯ ಸರ್ಕಾರವು ಕಾಲಕಾಲಕ್ಕೆ ಗೊತ್ತುಪಡಿಸಬಹುದಾದಂಥ ಪ್ರಕಾರ್ಯಗಳನ್ನು ನಿರ್ವಹಿಸುವುದು ಮಂಡಳಿಯ ಕರ್ತವ್ಯವಾಗಿರತಕ್ಕದ್ದು.

(2) (1)ನೇ ಉಪಪ್ರಕರಣದ ಉಪಬಂಧಗಳ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ ಮಂಡಳಿಯು, ತಾನು ರಚಿಸಬಹುದಾದಂಥ ವಿನಿಯಮನಗಳಿಗೆ ಒಳಪಟ್ಟು, ಈ ಮುಂದಿನ ಎಲ್ಲ ಅಥವಾ ಯಾವುವೇ ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು, ಮತ್ತು ಪ್ರಕಾರ್ಯಗಳನ್ನು ಪಾಲಿಸತಕ್ಕದ್ದು, ಎಂದರೆ:–

(ಎ) ಗ್ರಾಮೋದ್ಯೋಗಗಳನ್ನು ಪ್ರಾರಂಭಿಸುವುದು,ಅವುಗಳಿಗೆ ಉತ್ತೇಜನ ನೀಡುವುದು, ನೆರವು ನೀಡುವುದು ಮತ್ತು ಅವುಗಳನ್ನು ನಡೆಸುವುದು ಮತ್ತು ಅಂಥ ಉದ್ದಿಮೆಗಳಲ್ಲಿ ವ್ಯಾಪಾರ ಅಥವಾ ವಹಿವಾಟು ನಡೆಸುವುದು ಮತ್ತು ಅಂಥ ವ್ಯಾಪಾರಕ್ಕೆ ಅಥವಾ ವಹಿವಾಟಿಗೆ ಆನುಷಂಗಿಕವಾದ ವಿಷಯಗಳು;

(ಬಿ) ಯಾವುದೇ ಗ್ರಾಮೋದ್ಯೋಗದಲ್ಲಿ ತೊಡಗಿರುವ ಯಾವನೇ ವ್ಯಕ್ತಿಗೆ ಅಗತ್ಯವಾಗಬಹುದಾದಂಥ ನೆರವನ್ನು ಒದಗಿಸುವುದು;

(ಸಿ) ಗ್ರಾಮೋದ್ಯೋಗಗಳಿಗಾಗಿ ಸಹಕಾರ ಸಂಘಗಳನ್ನು ಸಂಘಟಿಸುವುದು ಮತ್ತು ನೆರವು ನೀಡುವುದು;

(ಡಿ) ತರಬೇತಿ ಕೇಂದ್ರಗಳನ್ನು ನಡೆಸುವುದು;

(ಇ) (i) ಗ್ರಾಮೋದ್ಯೋಗಗಳನ್ನು ನಡೆಸಲು ಅಗತ್ಯವಾದ ಸಲಕರಣೆಗಳ, ಉಪಕರಣಗಳ ಮತ್ತು ಇತರ ಸಾಧನ ಸಾಮಗ್ರಿಗಳ ತಯಾರಿಕೆಗೆ ಏರ್ಪಾಟು ಮಾಡುವುದು;

(ii) ಗ್ರಾಮೋದ್ಯೋಗಗಳಿಗೆ ಅಗತ್ಯವಾದ ಕಚ್ಚಾ ವಸ್ತುಗಳ, ಸಲಕರಣೆಗಳ, ಉಪಕರಣಗಳ ಮತ್ತು ಇತರ ಸಾಧನ ಸಾಮಗ್ರಿಗಳ ಪೂರೈಕೆಗೆ ಏರ್ಪಾಟು ಮಾಡುವುದು; ಮತ್ತು

(iii) ಸದರಿ ಉದ್ದಿಮೆಗಳ ಉತ್ಪನ್ನಗಳ ಮಾರಾಟಕ್ಕೆ ಏರ್ಪಾಟು ಮಾಡುವುದು;

(ಎಫ್) ದಾಸ್ತಾನು ಮಳಿಗೆಗಳನ್ನು, ಅಂಗಡಿಗಳನ್ನು, ವ್ಯಾಪಾರ ಕೇಂದ್ರಗಳನ್ನು ಅಥವಾ ಪ್ರದರ್ಶನ ಮಳಿಗೆಗಳನ್ನು ತೆರೆಯುವ ಮೂಲಕ, ಸದರಿ ಉದ್ದಿಮೆಗಳು ಸಿದ್ಧಪಡಿಸಿದ ಉತ್ಪನ್ನಗಳ ಪ್ರಚಾರಕ್ಕಾಗಿ ಮತ್ತು ಅವುಗಳನ್ನು ಜನಪ್ರಿಯಗೊಳಿಸುವುದಕ್ಕಾಗಿ ಏರ್ಪಾಟು ಮಾಡುವುದು;

(ಜಿ) ಗ್ರಾಮೋದ್ಯೋಗಗಳಿಗೆ ಸಂಬಂಧಿಸಿದ ಸಂಶೋಧನಾ ಕಾರ್ಯಗಳನ್ನು ಕೈಗೊಳ್ಳುವುದು ಮತ್ತು ಪ್ರೋತ್ಸಾಹಿಸುವುದು ಮತ್ತು ಈ ಅಧಿನಿಯಮದ ಉದ್ದೇಶಗಳಿಗೆ ಆನುಷಂಗಿಕವಾದ ಮತ್ತು ಅನುಕೂಲಕರವಾದಂಥ ಚಟುವಟಿಕೆಗಳನ್ನು ನಡೆಸುವುದು;

(ಎಚ್) ಗ್ರಾಮೋದ್ಯೋಗಗಳ ಅಭಿವೃದ್ಧಿಗಾಗಿ ಇರುವ ಸಂಸ್ಥೆಗಳನ್ನು ನಿರ್ವಹಿಸುವುದು ಅಥವಾ ನಿರ್ವಹಿಸುವುದಕ್ಕೆ ನೆರವಾಗುವುದು;

(ಐ) ಈ ಅಧಿನಿಯಮದ ಉದ್ದೇಶಗಳನ್ನು ನೆರವೇರಿಸುವ ಉದ್ದೇಶಕ್ಕಾಗಿ ರಾಜ್ಯ ಸರ್ಕಾರವು ನಿರ್ದೇಶಿಸಬಹುದಾದಂಥ ಇತರ ಕರ್ತವ್ಯಗಳನ್ನು ನಿರ್ವಹಿಸುವುದು ಮತ್ತು ಇತರ ಪ್ರಕಾರ್ಯಗಳನ್ನು ನೆರವೇರಿಸುವುದು.

**14. ಮಂಡಳಿಯ ಸಾಮಾನ್ಯ ಅಧಿಕಾರಗಳು.–** ಮಂಡಳಿಯು, ಈ ಅಧಿನಿಯಮದ ಮೇರೆಗೆ ತನ್ನ ಪ್ರಕಾರ್ಯಗಳನ್ನು ನೆರವೇರಿಸುವ ಉದ್ದೇಶಗಳಿಗಾಗಿ ಈ ಮುಂದಿನ ಅಧಿಕಾರಗಳನ್ನು ಹೊಂದಿರತಕ್ಕದ್ದು:–

(i) ತಾನು ಅಗತ್ಯವೆಂದು ಭಾವಿಸುವಂಥ ಚರ ಮತ್ತು ಸ್ಥಿರ ಆಸ್ತಿಗಳನ್ನು ಆರ್ಜಿಸುವುದು ಮತ್ತು ಹೊಂದಿರುವುದು ಮತ್ತು ಯಾವುದೇ ಅಂಥ ಆಸ್ತಿಯನ್ನು ಗುತ್ತಿಗೆಗೆ ನೀಡುವುದು, ಮಾರುವುದು ಅಥವಾ ಅನ್ಯಥಾ ವರ್ಗಾಯಿಸುವುದು:

ಪರಂತು, ಸ್ಥಿರ ಆಸ್ತಿಗಳಿಗೆ ಸಂಬಂಧಿಸಿದ ಸಂದರ್ಭದಲ್ಲಿ ಮೇಲೆ ಹೇಳಿದ ಅಧಿಕಾರಗಳನ್ನು ರಾಜ್ಯ ಸರ್ಕಾರದ ಪೂರ್ವ ಮಂಜೂರಾತಿ ಪಡೆದು ಚಲಾಯಿಸತಕ್ಕದ್ದು;

(ii) ವೆಚ್ಚಗಳನ್ನು ಮಾಡುವುದು ಮತ್ತು ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸುವ ಉದ್ದೇಶಕ್ಕಾಗಿ ತಾನು ಅಗತ್ಯವೆಂದು ಪರಿಗಣಿಸಬಹುದಾದಂತೆ ಅಥವಾ ರಾಜ್ಯ ಸರ್ಕಾರ ಮತ್ತು [1][ಖಾದಿ ಮತ್ತು ಗ್ರಾಮೋದ್ಯೋಗಗಳ ಆಯೋಗ][1] ವು ಈ ಅಧಿನಿಯಮದ ಉಪಬಂಧಗಳಿಗೆ ಮತ್ತು ಅದರ ಅಡಿಯಲ್ಲಿ ರಚಿಸಿದ ನಿಯಮಗಳಿಗೊಳಪಟ್ಟು ತನಗೆ ವಹಿಸಿಕೊಡಬಹುದಾದಂಥ ಯೋಜನೆಗಳನ್ನು ರೂಪಿಸಲು ಮತ್ತು ಕಾರ್ಯಗತಗೊಳಿಸಲು ರಾಜ್ಯದ ಯಾವುದೇ ಪ್ರದೇಶದಲ್ಲಿ ಕಾಮಗಾರಿಗಳನ್ನು ಕೈಗೊಳ್ಳುವುದು;

1. 1958ರ ಅಧಿನಿಯಮ 25ರ ಮೂಲಕ 25.12.1958 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(iii) ಗೊತ್ತುಪಡಿಸಬಹುದಾದಂಥ ನಿಯಮಗಳಿಗೆ ಒಳಪಟ್ಟು, ಸಾಲಗಳನ್ನು, ಅನುದಾನಗಳನ್ನು ಮತ್ತು ಸಹಾಯಧನಗಳನ್ನು ಮಂಜೂರು ಮಾಡುವುದು.

## ಅಧ್ಯಾಯ – IV

## ಕಾರ್ಯಕ್ರಮಗಳನ್ನು ಸಿದ್ಧಪಡಿಸುವುದು ಮತ್ತು ಸಲ್ಲಿಸುವುದು

**15. ವಾರ್ಷಿಕ ಕಾರ್ಯಕ್ರಮಗಳನ್ನು ಸಿದ್ಧಪಡಿಸುವುದು ಮತ್ತು ಸಲ್ಲಿಸುವುದು.–** (1) ಪ್ರತಿ ವರ್ಷವೂ, ಮಂಡಳಿಯು, ರಾಜ್ಯ ಸರ್ಕಾರವು ನಿರ್ಧರಿಸಬಹುದಾದಂಥ ರೂಪದಲ್ಲಿ ಮತ್ತು ಅಂಥ ದಿನಾಂಕಕ್ಕೆ ಮೊದಲು ಕೆಲಸಗಳ ಕಾರ್ಯಕ್ರಮ ಪಟ್ಟಿಯೊಂದನ್ನು ಸಿದ್ಧಪಡಿಸತಕ್ಕದ್ದು ಮತ್ತು ರಾಜ್ಯ ಸರ್ಕಾರಕ್ಕೆ ಕಳುಹಿಸಿಕೊಡತಕ್ಕದ್ದು.

(2) ಕೆಲಸದ ಕಾರ್ಯಕ್ರಮ ಪಟ್ಟಿಯು,–

(ಎ) ಮಂಡಳಿಯು, ಮುಂದಿನ ವರ್ಷದ ಅವಧಿಯಲ್ಲಿ ಭಾಗಶಃ ಅಥವಾ ಪೂರ್ಣವಾಗಿ ಕಾರ್ಯಗತಗೊಳಿಸಲು ಉದ್ದೇಶಿಸಿರುವಂಥ ಯೋಜನೆಯ ವಿವರಗಳನ್ನು;

(ಬಿ) ಮಂಡಳಿಯು, ಈ ಅಧಿನಿಯಮದ ಮೇರೆಗೆ ತನ್ನ ಪ್ರಕಾರ್ಯಗಳನ್ನು ನೆರವೇರಿಸುವ ಉದ್ದೇಶಗಳಿಗಾಗಿ ಮುಂದಿನ ವರ್ಷದ ಅವಧಿಯಲ್ಲಿ ಸಂಘಟಿಸಲು ಉದ್ದೇಶಿಸಿರುವ ಯಾವುದೇ ಕೆಲಸದ ಅಥವಾ ಉದ್ದಿಮೆಯ ವಿವರಗಳನ್ನು; ಮತ್ತು

(ಸಿ) ಗೊತ್ತುಪಡಿಸಬಹುದಾದಂಥ ಇತರ ವಿವರಗಳನ್ನು

– ಒಳಗೊಂಡಿರತಕ್ಕದ್ದು.

**16. ಕಾರ್ಯಕ್ರಮದ ಮಂಜೂರಾತಿ.–** ರಾಜ್ಯ ಸರ್ಕಾರವು, ಕಾರ್ಯಕ್ರಮವನ್ನು ಇಡಿಯಾಗಿ ಅಥವಾ ತಾನು ಯುಕ್ತವೆಂದು ಭಾವಿಸುವಂಥ ಮಾರ್ಪಾಟುಗಳೊಡನೆ ಅನುಮೋದಿಸಬಹುದು ಮತ್ತು ಮಂಜೂರು ಮಾಡಬಹುದು.

**17. ಪೂರಕ ಕಾರ್ಯಕ್ರಮ.–** ಮಂಡಳಿಯು, ರಾಜ್ಯ ಸರ್ಕಾರವು ಗೊತ್ತುಪಡಿಸಬಹುದಾದಂಥ ರೂಪದಲ್ಲಿ ಮತ್ತು ಅಂಥ ದಿನಾಂಕದ ಒಳಗೆ ಒಂದು ಪೂರಕ ಕಾರ್ಯಕ್ರಮವನ್ನು ರಾಜ್ಯ ಸರ್ಕಾರದ ಮಂಜೂರಾತಿಗಾಗಿ ಸಿದ್ಧಪಡಿಸಿ ಕಳುಹಿಸಿಕೊಡಬಹುದು ಮತ್ತು 15ನೇ ಪ್ರಕರಣದ ಉಪಬಂಧಗಳು ಅಂಥ ಪೂರಕ ಕಾರ್ಯಕ್ರಮಗಳಿಗೆ ಅನ್ವಯವಾಗತಕ್ಕದ್ದು.

## ಅಧ್ಯಾಯ - V

## ಹಣಕಾಸು, ಲೆಕ್ಕಪತ್ರಗಳು, ಲೆಕ್ಕಪರಿಶೋಧನೆ ಮತ್ತು ಋಣಗಳು

**18. ಸ್ವತ್ತಿನ ವರ್ಗಾವಣೆ.–** ರಾಜ್ಯ ಸರ್ಕಾರವು, ಈ ಅಧಿನಿಯಮದ ಉದ್ದೇಶಗಳಿಗಾಗಿ ಮಂಡಳಿಗೆ ಕಟ್ಟಡಗಳನ್ನು, ಭೂಮಿಯನ್ನು ಅಥವಾ ಯಾವುದೇ ಇತರ ಸ್ಥಿರ ಅಥವಾ ಚರ ಆಸ್ತಿಯನ್ನು ಯುಕ್ತವೆಂದು ಭಾವಿಸಬಹುದಾದಂಥ ಷರತ್ತುಗಳ ಮೇಲೆ, ಬಳಕೆಗಾಗಿ ಮತ್ತು ನಿರ್ವಹಣೆಗಾಗಿ ವರ್ಗಾಯಿಸಬಹುದು.

**19. ಮಂಡಳಿಯ ಸ್ಥಾಪನೆಗೆ ಮುಂಚೆ ಮಾಡಿದ ವೆಚ್ಚಗಳು ಮತ್ತು ಮಾಡಿಕೊಂಡ ಕರಾರುಗಳು.–** ಮಂಡಳಿಯ ಸ್ಥಾಪನೆಗೆ ಮುಂಚೆ ಅಥವಾ ಸ್ಥಾಪನೆಯ ದಿನಾಂಕದವರೆಗೆ ಈ ಅಧಿನಿಯಮದ ಉದ್ದೇಶಗಳ ಸಂಬಂಧದಲ್ಲಿ ಅಥವಾ ಅವುಗಳಿಗಾಗಿ ರಾಜ್ಯ ಸರ್ಕಾರವು ಅಥವಾ ರಾಜ್ಯ ಸರ್ಕಾರದೊಂದಿಗೆ ಅಥವಾ ರಾಜ್ಯ ಸರ್ಕಾರದ ಪರವಾಗಿ ಮಾಡಿದ ಎಲ್ಲ ಸಾಲಗಳನ್ನು ಮತ್ತು ವೆಚ್ಚಗಳನ್ನು ಅಥವಾ ಅದರೊಂದಿಗೆ ಮಾಡಿಕೊಂಡ ಎಲ್ಲಾ ಕರಾರುಗಳನ್ನು ಅಥವಾ ಅದು ಮಾಡಲು ತೊಡಗಿದ ಎಲ್ಲಾ ವಿಷಯಗಳನ್ನು ಮತ್ತು ಕಾರ್ಯಗಳನ್ನು ಮಂಡಳಿಯಿಂದ, ಮಂಡಳಿಯೊಂದಿಗೆ ಅಥವಾ ಮಂಡಳಿಯ ಪರವಾಗಿ ಅನುಕ್ರಮವಾಗಿ ಮಾಡಲಾಗಿದೆಯೆಂದು, ಮಾಡಿಕೊಳ್ಳಲಾಗಿದೆಯೆಂದು ಮತ್ತು ಮಾಡಲು ತೊಡಗಲಾಗಿದೆ ಎಂದು ಭಾವಿಸತಕ್ಕದ್ದು ಮತ್ತು ಅವುಗಳಿಗೆ ಸಂಬಂಧಿಸಿದಂತೆ, ರಾಜ್ಯ ಸರ್ಕಾರವು ಅಥವಾ ಅದರ ವಿರುದ್ಧ ಹೂಡಿದ ಎಲ್ಲ ದಾವೆಗಳನ್ನು ಮತ್ತು ಇತರ ಕಾನೂನು ವ್ಯವಹರಣೆಗಳನ್ನು, ಸಂದರ್ಭಾನುಸಾರ, ಮಂಡಳಿಯು ಅಥವಾ ಅದರ ವಿರುದ್ಧ ಹಾಗೆಂದು ಹೂಡಲಾದಂಥವು ಮತ್ತು ಮುಂದುವರಿಯುವಂಥವು ಎಂದು ಭಾವಿಸತಕ್ಕದ್ದು.

**20. ಮಂಡಳಿಗೆ ಸಹಾಯಧನಗಳು ಮತ್ತು ಸಾಲಗಳು.–** (1) ಸರ್ಕಾರವು, ಈ ಅಧಿನಿಯಮದ ಉದ್ದೇಶಗಳಿಗಾಗಿ, ಪ್ರತಿ ಸಂದರ್ಭದಲ್ಲಿ ತಾನು ನಿರ್ಧರಿಸಬಹುದಾದಂಥ ನಿಬಂಧನೆಗಳು ಮತ್ತು ಷರತ್ತುಗಳ ಮೇರೆಗೆ ಮಂಡಳಿಗೆ ಕಾಲಕಾಲಕ್ಕೆ ಸಹಾಯ ಧನವನ್ನು ಮತ್ತು ಅನುದಾನಗಳನ್ನು ನೀಡಬಹುದು.

(2) ಮಂಡಳಿಯು, ಕಾಲಕಾಲಕ್ಕೆ ರಾಜ್ಯ ಸರ್ಕಾರದ ಪೂರ್ವ ಮಂಜೂರಾತಿಯೊಂದಿಗೆ ಮತ್ತು ಈ ಅಧಿನಿಯಮದ ಉಪಬಂಧಗಳಿಗೆ ಮತ್ತು ರಾಜ್ಯ ಸರ್ಕಾರವು ಗೊತ್ತುಪಡಿಸಬಹುದಾದಂಥ ಷರತ್ತುಗಳಿಗೆ ಒಳಪಟ್ಟು, ಈ ಅಧಿನಿಯಮದ ಉದ್ದೇಶಗಳಿಗೆ ಅಗತ್ಯವಿರುವ ಯಾವುದೇ ಮೊತ್ತದ ಹಣವನ್ನು ಸಾಲ ಪಡೆಯಬಹುದು.

**21. ಮಂಡಳಿಯ ನಿಧಿಗಳು.–** (1) ಮಂಡಳಿಯು, ತನ್ನದೇ ಆದ ನಿಧಿಯನ್ನು ಹೊಂದಿರತಕ್ಕದ್ದು ಮತ್ತು ಮಂಡಳಿಯ ಎಲ್ಲಾ ಸ್ವೀಕೃತಿಗಳು ಅದಕ್ಕೆ ಜಮೆಯಾಗತಕ್ಕದ್ದು ಮತ್ತು ಮಂಡಳಿ ಮಾಡುವ ಎಲ್ಲಾ ಸಂದಾಯಗಳನ್ನು ಅದರಿಂದ ಭರಿಸತಕ್ಕದ್ದು.

(2) ಮಂಡಳಿಯು, ಈ ಅಧಿನಿಯಮದ ಎಲ್ಲ ಅಥವಾ ಯಾವುದೇ ಉದ್ದೇಶಕ್ಕಾಗಿ, ರಾಜ್ಯ ಮತ್ತು ಕೇಂದ್ರ ಸರ್ಕಾರಗಳಿಂದ ಅಥವಾ [1][ಖಾದಿ ಮತ್ತು ಗ್ರಾಮೋದ್ಯೋಗಗಳ ಆಯೋಗದಿಂದ][1] ಅಥವಾ ಸ್ಥಳೀಯ ಪ್ರಾಧಿಕಾರದಿಂದ ಅಥವಾ ನಿಗಮಿತವಾದ ಅಥವಾ ಆಗಿಲ್ಲದ ಯಾವುದೇ ನಿಕಾಯದಿಂದ ಅಥವಾ ಸಂಸ್ಥೆಯಿಂದ ಅಥವಾ ವ್ಯಕ್ತಿಯಿಂದ ಅನುದಾನಗಳನ್ನು, ಸಹಾಯಧನಗಳನ್ನು, ದೇಣಿಗೆಗಳನ್ನು ಮತ್ತು ಕೊಡುಗೆಗಳನ್ನು ಅಂಗೀಕರಿಸಬಹುದು.

1. 1958ರ ಅಧಿನಿಯಮ 25ರ ಮೂಲಕ 25.12.1958ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(3) ರಾಜ್ಯ ಮತ್ತು ಕೇಂದ್ರ ಸರ್ಕಾರಗಳಿಂದ ಅಥವಾ [1][ಖಾದಿ ಮತ್ತು ಗ್ರಾಮೋದ್ಯೋಗಗಳ ಆಯೋಗ][1]ದಿಂದ ಅಥವಾ ಸ್ಥಳೀಯ ಪ್ರಾಧಿಕಾರದಿಂದ ಅಥವಾ ರಾಜ್ಯದಲ್ಲಿನ ಸಹಕಾರಿ ಸಂಘಗಳಿಗೆ ಅನ್ವಯಿಸುವ ಯಾವುದೇ ಕಾನೂನಿನ ಮೇರೆಗೆ ನೋಂದಾಯಿತವಾದ ಸಹಕಾರಿ ಬ್ಯಾಂಕ್ [2][ಅಥವಾ ಭಾರತೀಯ ರಿಸರ್ವ್ ಬ್ಯಾಂಕ್ ಅಧಿನಿಯಮ, 1934ರ ಎರಡನೇ ಅನುಸೂಚಿಯಲ್ಲಿ ಸೇರಿದ ಒಂದು ಬ್ಯಾಂಕ್‌ನಿಂದ ಅಥವಾ ಭಾರತೀಯ ಸ್ಟೇಟ್ ಬ್ಯಾಂಕ್ ಅಧಿನಿಯಮ, 1955ರ ಮೇರೆಗೆ ಸ್ಥಾಪಿತವಾದ ಭಾರತೀಯ ಸ್ಟೇಟ್ ಬ್ಯಾಂಕಿನಿಂದ ಅಥವಾ ಭಾರತೀಯ ಸ್ಟೇಟ್ ಬ್ಯಾಂಕ್ (ಸಹಾಯಕ ಬ್ಯಾಂಕುಗಳು) ಅಧಿನಿಯಮ, 1959ರಲ್ಲಿ ವ್ಯಾಖ್ಯಾನಿಸಿದಂತೆ ಇರುವ ಒಂದು ಸಹಾಯಕ ಬ್ಯಾಂಕಿನಿಂದ ಅಥವಾ ಬ್ಯಾಂಕಿಂಗ್ ಕಂಪನಿಗಳ (ಉದ್ಯಮಗಳ ಸ್ವಾಧೀನ ಮತ್ತು ವರ್ಗಾವಣೆ) ಅಧಿನಿಯಮ, 1970 ರ ಮೇರೆಗೆ ಸ್ಥಾಪಿತವಾದ ಒಂದು ಸಂವಾದಿ ಹೊಸ ಬ್ಯಾಂಕ್][2] ನಿಂದ ಮಂಡಳಿಯು ಸಾಲಗಳನ್ನು ಪಡೆಯಬಹುದು.

1. 1958ರ ಅಧಿನಿಯಮ 25ರ ಮೂಲಕ 25.12.1958ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

2. 1978ರ ಅಧಿನಿಯಮ 16 ರ ಮೂಲಕ 11.5.1978 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(4) ಮಂಡಳಿಯ ನಿಧಿಗೆ ಸೇರಿದ ಎಲ್ಲಾ ಹಣವನ್ನು, ರಾಜ್ಯ ಸರ್ಕಾರವು, ವಿಶೇಷ ಅಥವಾ ಸಾಮಾನ್ಯ ಆದೇಶದ ಮೂಲಕ ನಿರ್ದೇಶಿಸಬಹುದಾದಂಥ ರೀತಿಯಲ್ಲಿ ಠೇವಣಿಯಾಗಿಡತಕ್ಕದ್ದು.

(5) ಮಂಡಳಿಯ ಲೆಕ್ಕಪತ್ರಗಳನ್ನು ಮಂಡಳಿಯು ಅಧಿಕೃತಗೊಳಿಸಬಹುದಾದಂಥ ಅಧಿಕಾರಿಗಳು ಜಂಟಿಯಾಗಿ ಅಥವಾ ವೈಯಕ್ತಿಕವಾಗಿ ನಿರ್ವಹಿಸತಕ್ಕದ್ದು.

**22. ನಿಧಿ ಮತ್ತು ಸ್ವತ್ತಿನ ವಿನಿಯೋಗ.–** ಈ ಅಧಿನಿಯಮದ ಉಪಬಂಧಗಳಿಗೆ ಒಳಪಟ್ಟು, ಮಂಡಳಿಯು ಎಲ್ಲ ಸ್ವತ್ತನ್ನು, ನಿಧಿಯನ್ನು ಮತ್ತು ಇತರ ಆಸ್ತಿಗಳನ್ನು ಹೊಂದಿರತಕ್ಕದ್ದು ಮತ್ತು ಅವುಗಳನ್ನು ಈ ಅಧಿನಿಯಮದ ಉದ್ದೇಶಗಳಿಗಾಗಿ ವಿನಿಯೋಗಿಸತಕ್ಕದ್ದು.

[1][**22ಎ. ಮಂಡಳಿಗೆ ಬರಬೇಕಾದ ಹಣವನ್ನು ಭೂ ಕಂದಾಯದ ಬಾಕಿಯಂತೆ ವಸೂಲಿ ಮಾಡುವುದು.–** (1) ಯಾವುದೇ ವ್ಯಕ್ತ ಅಥವಾ ಇಂಗಿತ ಅಥವಾ ಅನ್ಯಥಾ ಆದ ಒಪ್ಪಂದದ ಮೇರೆಗೆ, ಮಂಡಳಿಗೆ ಸಂದಾಯ ಮಾಡಬೇಕಾದ ಯಾವುದೇ ಮೊತ್ತವನ್ನು ಕೊನೆಯ ದಿನಾಂಕದಂದು ಅಥವಾ ಅದಕ್ಕೆ ಮೊದಲು ಸಂದಾಯ ಮಾಡದಿದ್ದಲ್ಲಿ ಮತ್ತು ಕ್ಲೇಮನ್ನು ವಿವಾದಿಸದಿರುವಲ್ಲಿ, ಅಧ್ಯಕ್ಷನು, ಮಂಡಳಿಗೆ ಬರಬೇಕಾದ ಮೊತ್ತವನ್ನು ಸೂಚಿಸುವ ಒಂದು ಪ್ರಮಾಣಪತ್ರವನ್ನು

ತನ್ನ ರುಜುವಿನೊಂದಿಗೆ ಜಿಲ್ಲಾಧಿಕಾರಿಗೆ ಕಳುಹಿಸತಕ್ಕದ್ದು, ಮತ್ತು ಆ ನಂತರ (2)ನೇ ಉಪಪ್ರಕರಣದ ಉಪಬಂಧಗಳಿಗೆ ಒಳಪಟ್ಟು, ಆ ಮೊತ್ತವನ್ನು ಜಿಲ್ಲಾಧಿಕಾರಿಯು ಭೂ ಕಂದಾಯದ ಬಾಕಿಯಂತೆ ವಸೂಲು ಮಾಡತಕ್ಕದ್ದು.

(2) ಆ ಮೊತ್ತವನ್ನು (1)ನೇ ಉಪಪ್ರಕರಣದ ಅರ್ಥವ್ಯಾಪ್ತಿಯಲ್ಲಿ ಮಂಡಳಿಗೆ ಸಂದಾಯ ಮಾಡಬೇಕಾಗಿದೆಯೇ ಎಂಬ ಬಗ್ಗೆ ಯಾವುದೇ ಪ್ರಶ್ನೆ ಉದ್ಭವಿಸಿದರೆ, ಅದನ್ನು ಈ ಉದ್ದೇಶಕ್ಕಾಗಿ ರಾಜ್ಯ ಸರ್ಕಾರವು ರಚಿಸಿದ ಒಂದು ನ್ಯಾಯಮಂಡಳಿಗೆ ಉಲ್ಲೇಖಿಸತಕ್ಕದ್ದು; ಅದು ತಾನು ಸೂಕ್ತವೆಂದು ಭಾವಿಸುವಂಥ ವಿಚಾರಣೆಯನ್ನು ನಡೆಸಿದ ನಂತರ ಮತ್ತು ಮೊತ್ತಗಳನ್ನು ಯಾರು ಸಂದಾಯ ಮಾಡಬೇಕಾಗಿದೆಯೆಂದು ಹೇಳಲಾಗಿದೆಯೋ ಆ ವ್ಯಕ್ತಿಗೆ ತನ್ನ ಅಹವಾಲನ್ನು ಹೇಳಿಕೊಳ್ಳಲು ಒಂದು ಯುಕ್ತ ಅವಕಾಶವನ್ನು ನೀಡಿದ ನಂತರ ಪ್ರಶ್ನೆಯನ್ನು ತೀರ್ಮಾನಿಸತಕ್ಕದ್ದು ಮತ್ತು ನ್ಯಾಯ ಮಂಡಳಿಯ ತೀರ್ಮಾನವು ಅಂತಿಮವಾಗಿರತಕ್ಕದ್ದು ಮತ್ತು ಅದನ್ನು ಯಾವುದೇ ನ್ಯಾಯಾಲಯದಲ್ಲಿ ಅಥವಾ ಯಾವುದೇ ಇತರ ಪ್ರಾಧಿಕಾರದಲ್ಲಿ ಪ್ರಶ್ನಿಸತಕ್ಕದ್ದಲ್ಲ.

(3) ನ್ಯಾಯ ಮಂಡಳಿಯು ಒಬ್ಬ ಜಿಲ್ಲಾ ನ್ಯಾಯಾಧೀಶನ ದರ್ಜೆಗಿಂತ ಕಡಿಮೆಯಲ್ಲದ ದರ್ಜೆಯ ಒಬ್ಬ ನ್ಯಾಯಾಂಗ ಅಧಿಕಾರಿಯನ್ನು ಒಳಗೊಂಡಿರತಕ್ಕದ್ದು.

(4) ನ್ಯಾಯ ಮಂಡಳಿಯ ಖರ್ಚು ವೆಚ್ಚಗಳನ್ನು ಮಂಡಳಿಯೇ ಭರಿಸತಕ್ಕದ್ದು.][1]

1. 1973ರ ಅಧಿನಿಯಮ 9ರ ಮೂಲಕ 8.5.1973 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

**23. ಆಯವ್ಯಯ.–** ಮಂಡಳಿಯು, ರಾಜ್ಯ ಸರ್ಕಾರವು ನಿಗದಿಗೊಳಿಸಬಹುದಾದಂಥ ದಿನಾಂಕದಂದು ಕಾರ್ಯಕ್ರಮಕ್ಕನುಗುಣವಾಗಿ ಮುಂದಿನ ಹಣಕಾಸಿನ ವರ್ಷಕ್ಕೆ ಅಂದಾಜು ಮಾಡಿದ ಸ್ವೀಕೃತಿಗಳು ಮತ್ತು ಬಂಡವಾಳ ಮತ್ತು ರಾಜಸ್ವ ಲೆಕ್ಕಗಳ ಮೇಲಿನ ವೆಚ್ಚವನ್ನು ತೋರಿಸುವ ಆಯವ್ಯಯ ತಯಾರಿಸಿ ಒಪ್ಪಿಸತಕ್ಕದ್ದು.

**24. ಆಯವ್ಯಯ ಮಂಜೂರಾತಿ.–** ರಾಜ್ಯಸರ್ಕಾರವು, ತನಗೆ ಸಲ್ಲಿಸಿದ ಆಯವ್ಯಯವನ್ನು, ತಾನು ಸೂಕ್ತವೆಂದು ಭಾವಿಸಬಹುದಾದಂಥ ಮಾರ್ಪಾಟುಗಳೊಂದಿಗೆ ಮಂಜೂರು ಮಾಡಬಹುದು.

**25. ಪೂರಕ ಆಯವ್ಯಯ.–** ಮಂಡಳಿಯು, ರಾಜ್ಯ ಸರ್ಕಾರವು ಗೊತ್ತುಪಡಿಸಬಹುದಾದಂಥ ನಮೂನೆಯಲ್ಲಿ ಮತ್ತು ಅಂಥ ದಿನಾಂಕದೊಳಗೆ ರಾಜ್ಯ ಸರ್ಕಾರದ ಮಂಜೂರಾತಿಗಾಗಿ ಒಂದು ಪೂರಕ ಆಯವ್ಯಯವನ್ನು ಸಲ್ಲಿಸಬಹುದು ಮತ್ತು 23ನೇ ಪ್ರಕರಣದ ಉಪಬಂಧಗಳು ಅಂಥ ಪೂರಕ ಆಯವ್ಯಯಕ್ಕೆ ಅನ್ವಯವಾಗತಕ್ಕದ್ದು.

**26. ವಾರ್ಷಿಕ ವರದಿ.–** ಮಂಡಳಿಯು, ಹಣಕಾಸು ವರ್ಷದ ಅಂತ್ಯದಿಂದ ಮೂರು ತಿಂಗಳೊಳಗೆ, ಹಿಂದಿನ ಹಣಕಾಸು ವರ್ಷದ ಅವಧಿಯಲ್ಲಿನ ತನ್ನ ಕಾರ್ಯಚಟುವಟಿಕೆಗಳ ಸಂಪೂರ್ಣ ವಿವರಗಳನ್ನು ನೀಡುವ ಒಂದು ವಾರ್ಷಿಕ ವರದಿಯನ್ನು ಗೊತ್ತುಪಡಿಸಬಹುದಾದಂಥ ರೀತಿಯಲ್ಲಿ ಸಿದ್ಧಪಡಿಸಿ, ರಾಜ್ಯ ಸರ್ಕಾರಕ್ಕೆ ಕಳುಹಿಸತಕ್ಕದ್ದು. ಅಂಥ ಪ್ರತಿಯೊಂದು ವರದಿಯನ್ನು ರಾಜ್ಯ ಸರ್ಕಾರವು ಅದನ್ನು ಸ್ವೀಕರಿಸಿದ ನಂತರ ಆದಷ್ಟು ಬೇಗನೆ ರಾಜ್ಯ ವಿಧಾನಮಂಡಲದ ಪ್ರತಿಯೊಂದು ಸದನದ ಮುಂದೆ ಮಂಡಿಸತಕ್ಕದ್ದು.

**27. ಹೆಚ್ಚಿನ ವರದಿ, ಅಂಕಿ ಅಂಶಗಳು ಮತ್ತು ವಿವರಪಟ್ಟಿಕೆಗಳು.–** ಮಂಡಳಿಯು, ರಾಜ್ಯ ಸರ್ಕಾರವು ಕಾಲಕಾಲಕ್ಕೆ ನಿರ್ದೇಶಿಸಬಹುದಾದಂಥ ದಿನಾಂಕಕ್ಕೂ ಮುಂಚೆ ಮತ್ತು ಅಂಥ ಮಧ್ಯಂತರಗಳಲ್ಲಿ ಮತ್ತು ಅಂಥ ರೀತಿಯಲ್ಲಿ, ರಾಜ್ಯ ಸರ್ಕಾರವು ನಿರ್ದೇಶಿಸಬಹುದಾದಂಥ ವಿಷಯಗಳು ಮತ್ತು ಅಂಥ ಅಂಕಿ ಅಂಶಗಳು ಮತ್ತು ಅಂಥ ವಿವರಪಟ್ಟಿಗಳ ಮೇಲಿನ ಒಂದು ವರದಿಯನ್ನು ರಾಜ್ಯ ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

**28. ಲೆಕ್ಕಪತ್ರಗಳು ಮತ್ತು ಲೆಕ್ಕಪರಿಶೋಧನೆ.–** ಮಂಡಳಿಯ ಲೆಕ್ಕಪತ್ರಗಳನ್ನು ಗೊತ್ತುಪಡಿಸಬಹುದಾದಂಥ ರೀತಿಯಲ್ಲಿ ನಿರ್ವಹಿಸತಕ್ಕದ್ದು ಮತ್ತು ಲೆಕ್ಕಪತ್ರಗಳ ವಾರ್ಷಿಕ ವಿವರ ಪತ್ರವನ್ನು ಸಿದ್ಧಪಡಿಸತಕ್ಕದ್ದು. ಅಂಥ ಲೆಕ್ಕಪತ್ರಗಳನ್ನು ರಾಜ್ಯ ಸರ್ಕಾರವು ನೇಮಿಸಿದ ಒಬ್ಬ ಲೆಕ್ಕ ಪರಿಶೋಧಕನು ಪರಿಶೋಧನೆ ಮಾಡತಕ್ಕದ್ದು.

## ಅಧ್ಯಾಯ - VI

### ಸಂಕೀರ್ಣ

**29. ಮಂಡಳಿಯ ಸದಸ್ಯರು ಮತ್ತು ಮಂಡಳಿಯ ಸಿಬ್ಬಂದಿ ಸದಸ್ಯರು ಸರ್ಕಾರಿ ನೌಕರರಾಗಿರುವುದು.–** ಮಂಡಳಿಯ ಸದಸ್ಯರನ್ನು ಮತ್ತು ಮಂಡಳಿಯ ಸಿಬ್ಬಂದಿ ಸದಸ್ಯರನ್ನು, ಈ ಅಧಿನಿಯಮದ ಯಾವುವೇ ಉಪಬಂಧಗಳ ಅನುಸರಣೆಯಲ್ಲಿ ಕಾರ್ಯನಿರ್ವಹಿಸುವಾಗ ಅಥವಾ ಅವರು ಕಾರ್ಯನಿರ್ವಹಿಸುತ್ತಿದ್ದಾರೆಂದು ತಾತ್ಪರ್ಯವಾಗುವಾಗ, ಅವರನ್ನು ಭಾರತ ದಂಡ ಸಂಹಿತೆ, 1860 (1860ರ ಕೇಂದ್ರ ಅಧಿನಿಯಮ XLV)ರ 21ನೇ ಪ್ರಕರಣದ ಅರ್ಥವ್ಯಾಪ್ತಿಯೊಳಗೆ ಸರ್ಕಾರಿ ನೌಕರರೆಂದು ಭಾವಿಸತಕ್ಕದ್ದು.

**30. ಈ ಅಧಿನಿಯಮದ ಮೇರೆಗೆ ಕೈಗೊಂಡ ಕ್ರಮಕ್ಕೆ ರಕ್ಷಣೆ.–** ಈ ಅಧಿನಿಯಮದ ಮೇರೆಗೆ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲಾಗಿದೆಯೆಂದು ತಾತ್ಪರ್ಯವಾಗುವ ಯಾವುದೇ ಕೃತ್ಯಕ್ಕಾಗಿ ಯಾವನೇ ವ್ಯಕ್ತಿಯ ವಿರುದ್ಧ ಯಾವುದೇ ದಾವೆ, ಪ್ರಾಸಿಕ್ಯೂಷನ್ ಅಥವಾ ಇತರ ಕಾನೂನು ಕ್ರಮವನ್ನು ತೆಗೆದುಕೊಳ್ಳತಕ್ಕದ್ದಲ್ಲ.

[1][**30ಎ. ಮಂಡಳಿಯ ವಿಸರ್ಜನೆ.–** (1) ರಾಜ್ಯ ಸರ್ಕಾರವು, ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ, ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ದಿನಾಂಕದಿಂದ ಜಾರಿಗೆ ಬರುವಂತೆ, ಮಂಡಳಿಯು ವಿಸರ್ಜನೆಯಾಗತಕ್ಕದೆಂದು ಘೋಷಿಸಬಹುದು ಮತ್ತು ಅದರ ನಂತರ ಮಂಡಳಿ ವಿಸರ್ಜನೆಗೊಂಡಿದೆಯೆಂದು ಭಾವಿಸತಕ್ಕದ್ದು ಮತ್ತು ಅದಕ್ಕನುಸಾರವಾಗಿ ಮಂಡಳಿ ಮತ್ತು ಮಂಡಳಿಯಿಂದ ರಚಿತವಾದ ಯಾವುದೇ ಸಮಿತಿಯು ಕಾರ್ಯನಿರ್ವಹಿಸುವುದು ನಿಂತುಹೋಗತಕ್ಕದ್ದು.

(2) ಸದರಿ ದಿನಾಂಕದಂದು ಮತ್ತು ಅಂದಿನಿಂದ,–

(ಎ) ಸದರಿ ದಿನಾಂಕದ ನಿಕಟಪೂರ್ವದಲ್ಲಿ ಈ ಅಧಿನಿಯಮದ ಉದ್ದೇಶಕ್ಕಾಗಿ ಮಂಡಳಿಯ ಸ್ವಾಧೀನದಲ್ಲಿದ್ದ ಎಲ್ಲ ಸ್ವತ್ತುಗಳು ಮತ್ತು ನಿಧಿಗಳು ರಾಜ್ಯ ಸರ್ಕಾರದಲ್ಲಿ ನಿಹಿತವಾಗತಕ್ಕದ್ದು;

(ಬಿ) ಮಂಡಳಿಯ ಎಲ್ಲ ಸದಸ್ಯರೂ ಮಂಡಳಿಯ ತಮ್ಮ ಸದಸ್ಯ ಸ್ಥಾನವನ್ನು ತೆರವು ಮಾಡತಕ್ಕದ್ದು; ಮತ್ತು

(ಸಿ) ಮಂಡಳಿಯ ಎಲ್ಲ ಹಕ್ಕುಗಳು, ಬಾಧ್ಯತೆಗಳು ಮತ್ತು ಹೊಣೆಗಾರಿಕೆಗಳು (ಯಾವುದೇ ಕರಾರಿನ ಮೇರೆಗಿನ ಯಾವುವೇ ಹೊಣೆಗಾರಿಕೆಗಳೂ ಸೇರಿದಂತೆ) ರಾಜ್ಯ ಸರ್ಕಾರದ ಹಕ್ಕುಗಳು, ಬಾಧ್ಯತೆಗಳು ಮತ್ತು ಹೊಣೆಗಾರಿಕೆಗಳಾಗತಕ್ಕದ್ದು.][1]

1. 1973ರ ಅಧಿನಿಯಮ 9ರ ಮೂಲಕ 8.5.1973 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

**31. ನಿಯಮಗಳು.–** (1) ರಾಜ್ಯಸರ್ಕಾರವು [1][ಕರ್ನಾಟಕ ರಾಜ್ಯಪತ್ರ][1] ದಲ್ಲಿ ಅಧಿಸೂಚನೆಯ ಮೂಲಕ ಈ ಅಧಿನಿಯಮದ ಉದ್ದೇಶಗಳನ್ನು ನೆರವೇರಿಸುವುದಕ್ಕಾಗಿ ನಿಯಮಗಳನ್ನು ರಚಿಸಬಹುದು.

1. ಕರ್ನಾಟಕ ಕಾನೂನುಗಳ ಅಳವಡಿಕೆ ಆದೇಶ, 1973ರ ಮೂಲಕ 1.11.1973 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(2) ವಿಶೇಷವಾಗಿ ಮತ್ತು ಹಿಂದೆ ಹೇಳಿದ ಅಧಿಕಾರಗಳ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ ಅಂಥ ನಿಯಮಗಳು ಈ ಮುಂದಿನ ಎಲ್ಲ ಅಥವಾ ಯಾವುದೇ ವಿಷಯಗಳ ಬಗ್ಗೆ ಉಪಬಂಧಿಸಬಹುದು, ಎಂದರೆ:–

[1][(ಎ) 4ನೇ ಪ್ರಕರಣದ ಮೇರೆಗೆ ಮಂಡಳಿಯ ಅಧ್ಯಕ್ಷ ಮತ್ತು ಇತರ ಸದಸ್ಯರ ಪದಾವಧಿ ಮತ್ತು ಸೇವೆಯ ನಿಬಂಧನೆಗಳು ಮತ್ತು ಷರತ್ತುಗಳು;][1]

1. 1978ರ ಅಧಿನಿಯಮ 16 ರ ಮೂಲಕ 11.5.1978 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(ಬಿ) 12ನೇ ಪ್ರಕರಣದ ಮೇರೆಗೆ ಕರಾರುಗಳನ್ನು ಮಾಡಿಕೊಳ್ಳತಕ್ಕ ರೀತಿ ಮತ್ತು ನಮೂನೆ;

(ಸಿ) 13ನೇ ಪ್ರಕರಣದ ಮೇರೆಗೆ ಮಂಡಳಿಯ ಪ್ರಕಾರ್ಯಗಳು;

(ಡಿ) 15ನೇ ಪ್ರಕರಣದ ಮೇರೆಗೆ ಕಾರ್ಯಕ್ರಮದ ಇತರ ವಿವರಗಳು;

(ಇ) ಯಾವ ನಮೂನೆಯಲ್ಲಿ ಮತ್ತು ಯಾವ ದಿನಾಂಕಕ್ಕೆ ಮುಂಚೆ 17ನೇ ಪ್ರಕರಣದ ಮೇರೆಗೆ ಪೂರಕ ಕಾರ್ಯಕ್ರಮವನ್ನು ಸಲ್ಲಿಸಬೇಕೋ ಆ ನಮೂನೆ ಮತ್ತು ದಿನಾಂಕ;

(ಎಫ್) ಯಾವ ನಮೂನೆಯಲ್ಲಿ ಮತ್ತು ಯಾವ ದಿನಾಂಕಕ್ಕೆ ಮುಂಚೆ 25ನೇ ಪ್ರಕರಣದ ಮೇರೆಗೆ ಪೂರಕ ಆಯವ್ಯಯವನ್ನು ಸಲ್ಲಿಸಬೇಕೋ ಆ ನಮೂನೆ ಮತ್ತು ದಿನಾಂಕ;

(ಜಿ) ವಾರ್ಷಿಕ ವರದಿಯನ್ನು 26ನೇ ಪ್ರಕರಣದ ಮೇರೆಗೆ ಯಾವ ರೀತಿಯಲ್ಲಿ ಸಿದ್ಧಪಡಿಸಬೇಕೋ ಮತ್ತು ರಾಜ್ಯ ಸರ್ಕಾರಕ್ಕೆ ಕಳುಹಿಸಬೇಕೋ ಆ ರೀತಿ;

(ಹೆಚ್) 28ನೇ ಪ್ರಕರಣದ ಮೇರೆಗೆ ಲೆಕ್ಕಪತ್ರಗಳನ್ನು ನಿರ್ವಹಿಸುವ ಮತ್ತು ಲೆಕ್ಕಪತ್ರಗಳ ವಾರ್ಷಿಕ ವಿವರ ಪತ್ರವನ್ನು ಸಿದ್ಧಪಡಿಸುವ ರೀತಿ;

(ಐ) ಮಂಡಳಿಯ ಸಿಬ್ಬಂದಿ ಸದಸ್ಯರ ಸಂಭಾವನೆ, ಭತ್ಯೆಗಳು ಮತ್ತು ಇತರ ಸೇವಾ ಷರತ್ತುಗಳು ಮತ್ತು ಮಂಡಳಿಯ [1][[2][ಮುಖ್ಯ ಕಾರ್ಯನಿರ್ವಹಕ ಅಧಿಕಾರಿಯ ಮತ್ತು ಆರ್ಥಿಕ ಸಲಹೆಗಾರನ ಮತ್ತು ಮುಖ್ಯ ಲೆಕ್ಕಾಪತ್ರಾಧಿಕಾರಿ][1] ಯ ಪ್ರಕಾರ್ಯಗಳು;][2]

1. 1985ರ ಅಧಿನಿಯಮ 8ರ ಮೂಲಕ 1.6.1984 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
2. 1973ರ ಅಧಿನಿಯಮ 9ರ ಮೂಲಕ 8.5.1973 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(ಜೆ) ಈ ಅಧಿನಿಯಮದ ಮೇರೆಗೆ ಗೊತ್ತುಪಡಿಸಿರುವ ಅಥವಾ ಗೊತ್ತುಪಡಿಸಬಹುದಾದಂಥ ಯಾವುದೇ ಇತರ ವಿಷಯ.

[1][(2ಎ) ಈ ಅಧಿನಿಯಮದ ಮೇರೆಗೆ ಒಂದು ನಿಯಮವನ್ನು ಪೂರ್ವಾನ್ವಯವಾಗಿ ಜಾರಿಗೊಳ್ಳುವಂತೆ ಮಾಡಬಹುದು ಮತ್ತು ಅಂಥ ನಿಯಮವನ್ನು ರಚಿಸಿದಾಗ ರಾಜ್ಯವಿಧಾನ ಮಂಡಲದ ಎರಡೂ ಸದನಗಳ ಮುಂದೆ ಮಂಡಿಸುವ ವಿವರಪತ್ರದಲ್ಲಿ ಆ ನಿಯಮವನ್ನು ರಚಿಸಿದ್ದಕ್ಕೆ ಕಾರಣಗಳನ್ನು ನಿರ್ದಿಷ್ಟಪಡಿಸತಕ್ಕದ್ದು. (3)ನೇ ಉಪಪ್ರಕರಣದ ಮೇರೆಗೆ ಮಾಡಿದ ಯಾವುದೇ ಮಾರ್ಪಾಟಿಗೆ ಒಳಪಟ್ಟು, ಈ ಅಧಿನಿಯಮದ ಮೇರೆಗೆ ರಚಿಸಿದ ಪ್ರತಿಯೊಂದು ನಿಯಮವೂ ಈ ಅಧಿನಿಯಮದಲ್ಲಿ ಅಧಿನಿಯಮಿತವಾದುದೆಂಬಂತೆ ಪರಿಣಾಮ ಹೊಂದಿರತಕ್ಕದ್ದು.][1]

1. 1983ರ ಅಧಿನಿಯಮ 21ರ ಮೂಲಕ 8.7.1983 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

[1][(3) ಈ ಅಧಿನಿಯಮದ ಮೇರೆಗೆ ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ, ರಾಜ್ಯ ವಿಧಾನಮಂಡಲದ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ ಒಂದು ಅಧಿವೇಶನದಲ್ಲಿ ಅಥವಾ ಒಂದಾದ ಮೇಲೊಂದರಂತೆ ಅನುಕ್ರಮವಾಗಿ ಬರುವ ಎರಡು ಅಥವಾ ಹೆಚ್ಚು ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಇಡತಕ್ಕದ್ದು, ಮತ್ತು ಅದನ್ನು ಹಾಗೆ ಇಡಲಾದ ಅಧಿವೇಶನ ಅಥವಾ ಅದರ ನಿಕಟೋತ್ತರದ ಅಧಿವೇಶನದ ಮುಕ್ತಾಯಕ್ಕೆ ಮುಂಚೆ, ಆ ನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ಆ ನಿಯಮವನ್ನು ಮಾಡಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಆ ನಿಯಮವು ಆ ನಂತರ, ಸಂದರ್ಭಾನುಸಾರ ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು, ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ; ಆದಾಗ್ಯೂ, ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮದ ಮೇರೆಗೆ ಈ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧೆಯನ್ನುಂಟುಮಾಡತಕ್ಕದ್ದಲ್ಲ.][1]

1. 1973ರ ಅಧಿನಿಯಮ 9ರ ಮೂಲಕ 8.5.1973 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

**32. ವಿನಿಯಮನಗಳು.–** (1) ಮಂಡಳಿಯು, ರಾಜ್ಯಸರ್ಕಾರದ ಪೂರ್ವ ಮಂಜೂರಾತಿ ಪಡೆದು ಈ ಅಧಿನಿಯಮಕ್ಕೆ ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳಿಗೆ ಸಂಗತವಾಗುವ ವಿನಿಯಮನಗಳನ್ನು [1][ಕರ್ನಾಟಕ ರಾಜ್ಯಪತ್ರ][1] ದಲ್ಲಿ ಅಧಿಸೂಚನೆಯ ಮೂಲಕ ಮಾಡಬಹುದು.

1. ಕರ್ನಾಟಕ ಕಾನೂನುಗಳ ಅಳವಡಿಕೆ ಆದೇಶ, 1973ರ ಮೂಲಕ 1.11.1973 ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

(2) ವಿಶೇಷವಾಗಿ ಮತ್ತು ಹಿಂದೆ ಹೇಳಿದ ಅಧಿಕಾರದ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ, ಮಂಡಳಿಯು ಈ ಮುಂದಿನವುಗಳಿಗಾಗಿ ಉಪಬಂಧ ಕಲ್ಪಿಸುವ ವಿನಿಯಮನಗಳನ್ನು ರಚಿಸಬಹುದು:–

(ಎ) ತನ್ನ ವ್ಯವಹಾರದ ಪ್ರಕ್ರಿಯೆ ಮತ್ತು ವಿಲೇವಾರಿ;

(ಬಿ) ಮಂಡಳಿಯ ಸಿಬ್ಬಂದಿ ಸದಸ್ಯರ ಪ್ರಕಾರ್ಯಗಳು ಮತ್ತು ಕರ್ತವ್ಯಗಳು;

(ಸಿ) ಸಮಿತಿಗಳ ಪ್ರಕಾರ್ಯಗಳು ಮತ್ತು ಅಂಥ ಸಮಿತಿಗಳು ತಮ್ಮ ಪ್ರಕಾರ್ಯಗಳನ್ನು ನೆರವೇರಿಸುವಾಗ ಅನುಸರಿಸಬೇಕಾದ ಪ್ರಕ್ರಿಯೆ;

(ಡಿ) 13ನೇ ಪ್ರಕರಣದ (2)ನೇ ಉಪ ಪ್ರಕರಣದ ಮೇರೆಗೆ ಮಂಡಳಿಯು ಕರ್ತವ್ಯಗಳನ್ನು ನಿರ್ವಹಿಸಲು ಅಥವಾ ನೆರವೇರಿಸಲು ಒಳಪಡಬೇಕಾದ ಷರತ್ತುಗಳು.

**33. ಅನುಸೂಚಿಯ ತಿದ್ದುಪಡಿ.–** (1) ರಾಜ್ಯ ಸರ್ಕಾರವು [1][ಕರ್ನಾಟಕ ರಾಜ್ಯಪತ್ರ][1] ದಲ್ಲಿ ಅಧಿಸೂಚನೆಯ ಮೂಲಕ, ಈ ಅಧಿನಿಯಮದ ಅನುಸೂಚಿಯನ್ನು, ಯಾವುದೇ ಉದ್ಯಮವನ್ನು ಅದಕ್ಕೆ ಸೇರಿಸುವ ಅಥವಾ ಅದರಿಂದ ಬಿಟ್ಟುಬಿಡುವ ಮೂಲಕ ಮಾರ್ಪಾಟು ಮಾಡಬಹುದು.

1. ಕರ್ನಾಟಕ ಕಾನೂನುಗಳ ಅಳವಡಿಕೆ ಆದೇಶ, 1973ರ ಮೂಲಕ 1.11.1973 ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

(2) (1)ನೇ ಉಪಪ್ರಕರಣದ ಮೇರೆಗಿನ ಪ್ರತಿಯೊಂದು ಅಧಿಸೂಚನೆಯನ್ನು ಹೊರಡಿಸಿದ ನಂತರ ಆದಷ್ಟು ಬೇಗನೆ, ರಾಜ್ಯ ವಿಧಾನಮಂಡಲವು ಅಧಿವೇಶನದಲ್ಲಿರುವಾಗ ಅದರ ಪ್ರತಿಯೊಂದು ಸದನದ ಮುಂದೆ, ಒಂದು ಅಧಿವೇಶನದಲ್ಲಿ ಅಥವಾ ಎರಡು ಅಥವಾ ಹೆಚ್ಚಿನ ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಒಂದು ತಿಂಗಳ

ಅವಧಿಯವರೆಗೆ ಮಂಡಿಸತಕ್ಕದ್ದು ಮತ್ತು ಆ ಅವಧಿಯು ಮುಕ್ತಾಯಗೊಳ್ಳುವುದಕ್ಕೆ ಮುಂಚೆ ಯಾವುದೇ ಸದನವು ಆ ಅಧಿಸೂಚನೆಯಲ್ಲಿ ಯಾವುದೇ ಮಾರ್ಪಾಟು ಮಾಡಿದರೆ ಅಥವಾ ಆ ಅಧಿಸೂಚನೆಯು ಜಾರಿಗೊಳ್ಳತಕ್ಕದ್ದಲ್ಲ ಎಂದು ನಿರ್ದೇಶಿಸಿದರೆ ಮತ್ತು ಆ ಮಾರ್ಪಾಟನ್ನು ಅಥವಾ ನಿರ್ದೇಶನವನ್ನು ಮತ್ತೊಂದು ಸದನವು ಒಪ್ಪಿದರೆ, ಆ ಅಧಿಸೂಚನೆಯು ಆ ತರುವಾಯ ಸಂದರ್ಭಾನುಸಾರ ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ.

**34. ಉಳಿಸುವಿಕೆ.–** ಈ ಅಧಿನಿಯಮದಲ್ಲಿರುವುದು ಯಾವುದೂ, ಕೈಗಾರಿಕೆಗಳ (ಅಭಿವೃದ್ಧಿ ಮತ್ತು ವಿನಿಯಮನ) ಅಧಿನಿಯಮ, 1951 (1951ರ ಕೇಂದ್ರ ಅಧಿನಿಯಮ LXV)ರ ಮೇರೆಗೆ ಅನುಸೂಚಿತ ಕೈಗಾರಿಕೆಯೆಂದು ಘೋಷಿತವಾದ ಯಾವುದೇ ಕೈಗಾರಿಕೆಗೆ ಅನ್ವಯವಾಗುತ್ತದೆ ಎಂದಾಗಲಿ ಅಥವಾ ಸದರಿ ಅಧಿನಿಯಮದ ಯಾವುವೇ ಉಪಬಂಧಗಳಿಗೆ ಬಾಧಕವಾಗುತ್ತದೆ ಎಂದಾಗಲಿ ಭಾವಿಸತಕ್ಕದ್ದಲ್ಲ.

**35.** [1][ಬಿಟ್ಟುಬಿಡಲಾಗಿದೆ **XXX**][1]

1. ಕರ್ನಾಟಕ ಕಾನೂನುಗಳ ಅಳವಡಿಕೆ ಆದೇಶ, 1973ರ ಮೂಲಕ 1.11.1973 ರಿಂದ ಜಾರಿಗೆ ಬರುವಂತೆ 35ನೇ ಪ್ರಕರಣವನ್ನು ಬಿಟ್ಟುಬಿಡಲಾಗಿದೆ.

**ಅನುಸೂಚಿ**

**[2(V)ನೇ ಪ್ರಕರಣ ನೋಡಿ]**

[1][ **I. ಖಾದಿ ವಲಯ**

1. ಹತ್ತಿ ಖಾದಿ
2. ಉಣ್ಣೆ ಖಾದಿ
3. ರೇಷ್ಮೆ ಖಾದಿ
4. ಮಸ್ಲಿನ್ ಖಾದಿ

**ಗ್ರಾಮೋದ್ಯೋಗಗಳು**

**ಖನಿಜ ಆಧಾರಿತ ಕೈಗಾರಿಕೆ**

5. ಸುಣ್ಣದ ತಯಾರಿಕೆ
6. ಗ್ರಾಮ ಕುಂಬಾರಿಕೆ
7. ದೇವಸ್ಥಾನಗಳಿಗಾಗಿ ಮತ್ತು ಕಟ್ಟಡಗಳಿಗಾಗಿ ಕಲ್ಲು ಒಡೆಯುವುದು, ಅರೆಯುವುದು, ಕೊರೆಯುವುದು ಮತ್ತು ಕೆತ್ತುವುದು
8. ಬಳಕೆಯ ವಸ್ತುಗಳು
9. ಸ್ಲೇಟು ಮತ್ತು ಬಳಪದ ತಯಾರಿಕೆ
10. ಪ್ಲಾಸ್ಟರ್ ಆಫ್ ಪ್ಯಾರಿಸ್ ತಯಾರಿಕೆ

11. ಪಾತ್ರೆ ತೊಳೆಯುವ ಪುಡಿ

12. ಇಂಧನ ಮೂಲಕ ಗಟ್ಟಿಸಿ ಇಟ್ಟಿಗೆ ಮಾಡುವುದು

13. ಚಿನ್ನದಿಂದ, ಬೆಳ್ಳಿಯಿಂದ, ಹರಳುಗಳಿಂದ, ಚಿಪ್ಪುಗಳಿಂದ ಅಥವಾ ಸಿಂಥೆಟಿಕ್ ಸಾಮಗ್ರಿಗಳಿಂದ ಆಭರಣ ಮಾಡುವುದು

14. ಗುಲಾಲ್– ರಂಗೋಲಿಯ ತಯಾರಿಕೆ

15. ಬಳೆಗಳ ತಯಾರಿಕೆ

16. ಪೇಯಿಂಟ್, ಪಿಗ್ಮೆಂಟ್‌ಗಳು, ವಾರ್ನಿಶ್‌ಗಳು ಮತ್ತು ಡಿಸ್ಟೆಂಪರ್ ತಯಾರಿಕೆ

1. ಅಧಿಸೂಚನೆ ಸಂಖ್ಯೆ. ಎಸ್‌ಓ 679, ದಿನಾಂಕ 6.8.1990ರ ಮೂಲಕ ಪ್ರತಿಯೋಜಿಸಲಾಗಿದೆ.

## II. ಅರಣ್ಯ ಆಧಾರಿತ ಕೈಗಾರಿಕೆ

17. ಕೈಯಿಂದ ಮಾಡಿದ ಕಾಗದ

18. ಕತ್ತಾಳೆ

19. ಗೋಂದು ಮತ್ತು ರಾಳ

20. ಕುಟೀರ ಬೆಂಕಿ ಪೊಟ್ಟಣ

21. ಬೆತ್ತ ಮತ್ತು ಬಿದಿರು

22. ಅಗರಬತ್ತಿ

23. ಕಾಗದದ ಲೋಟಗಳು, ತಟ್ಟೆಗಳು, ಚೀಲಗಳು ಮತ್ತು ಇತರ ಧಾರಕಗಳ ತಯಾರಿಕೆ

24. ಕಾಗದದಿಂದ ಮಾಡಲಾಗುವ ಎಲ್ಲ ಇತರ ಲೇಖನ ಸಾಮಗ್ರಿಗಳ ತಯಾರಿಕೆಯೂ ಸೇರಿದಂತೆ ಎಕ್ಸರ್‌ಸೈಸ್ ಪುಸ್ತಕಗಳನ್ನು ತಯಾರಿಸುವುದು, ಪುಸ್ತಕ ಬೈಂಡಿಂಗ್, ಲಕೋಟೆ ತಯಾರಿಸುವುದು, ರಿಜಿಸ್ಟರ್ ಪುಸ್ತಕ ತಯಾರಿಸುವುದು

25. ಖುಸ್ ತಟ್ಟಿಗಳು ಮತ್ತು ಪೊರಕೆ ತಯಾರಿಸುವುದು

26. ಅರಣ್ಯ ಉತ್ಪನ್ನಗಳ ಸಂಗ್ರಹಣೆ, ಸಂಸ್ಕರಣೆ ಮತ್ತು ಪೊಟ್ಟಣ ಕಟ್ಟುವುದು

27. ಫೋಟೋ ಕಟ್ಟುಹಾಕುವುದು

28. ಸೆಣಬು ಉತ್ಪನ್ನಗಳ ತಯಾರಿಕೆ (ನಾರು ಉದ್ದಿಮೆಯಲ್ಲಿ)

## III. ಕೃಷಿ ಆಧಾರಿತ ಕೈಗಾರಿಕೆ

29. ಕಾಳು ಮತ್ತು ಬೇಳೆಗಳ ಸಂಸ್ಕರಣಾ ಉದ್ದಿಮೆ (ಅವಲಕ್ಕಿ ತಯಾರಿಕೆ, ಬೇಕರಿ, ಮಸಾಲೆ ತಯಾರಿಕೆ, ಹಪ್ಪಳ ತಯಾರಿಕೆ, ಅರಳು ತಯಾರಿಕೆ ಇತ್ಯಾದಿ)

30. ತಾಳೆ ಬೆಲ್ಲ

31. ಬೆಲ್ಲ ಮತ್ತು ಖಂಡಸಾರಿ

32. ಜೇನು ಸಾಕಾಣಿಕೆ

33. ಹಣ್ಣು ಮತ್ತು ತರಕಾರಿ ಸಂಸ್ಕರಣೆ ಮತ್ತು ಸಂರಕ್ಷಣೆ

34. ಗಾಣದ ಎಣ್ಣೆ

35. ನಾರು

36. ಅರಣ್ಯ ಔಷಧೀಯ ಸಸ್ಯಗಳ ಸಂಗ್ರಹಣೆ

37. ಬೆಂಡಿನ ಚಾಪೆಗಳು ಮತ್ತು ಹಾರಗಳ ತಯಾರಿಕೆ

38. ಗೋಡಂಬಿ ಸಂಸ್ಕರಣೆ

39. ದೊನ್ನೆಗಳ ತಯಾರಿಕೆ

## IV ಪಾಲಿಮರ್ ಮತ್ತು ರಾಸಾಯನಿಕ ಆಧಾರಿತ ಕೈಗಾರಿಕೆ

40. ಪೊಟ್ಟಣ ಕಟ್ಟುವ ಪ್ಲಾಸ್ಟಿಕ್ ವಸ್ತುಗಳ ತಯಾರಿಕೆ

41. ಬಿಂದಿ ತಯಾರಿಕೆ

42. ಮೆಹೆಂದಿ ತಯಾರಿಕೆ

43. ಅವಶ್ಯಕ ತೈಲ ತಯಾರಿಕೆ

44. ಶಾಂಪೂ ತಯಾರಿಕೆ

45. ಕೇಶ ತೈಲ ತಯಾರಿಕೆ

46. ಮಾರ್ಜಕ ಮತ್ತು ಬಟ್ಟೆ ಒಗೆಯುವ ಪುಡಿ ತಯಾರಿಕೆ (ವಿಷರಹಿತ)

47. ಗ್ರಾಮೀಣ ಚರ್ಮ ಕಸುಬು

48. ರಬ್ಬರ್ (ಕಚ್ಚಾ ರಬ್ಬರಿನ ಉತ್ಪನ್ನಗಳು)

49. ಖಾದ್ಯವಲ್ಲದ ತೈಲ ಮತ್ತು ಸಾಬೂನು

50. ದಂತದ ಉತ್ಪನ್ನಗಳೂ ಸೇರಿದಂತೆ ಕೊಂಬು ಮತ್ತು ಮೂಳೆ

51. ರೆಕ್ಸಿನ್, ಪಿವಿಸಿ ಇತ್ಯಾದಿಗಳಿಂದ ತಯಾರಿಸಿದ ವಸ್ತುಗಳು

52. ಮೇಣದ ಬತ್ತಿ, ಕರ್ಪೂರ ಮತ್ತು ಅರಗು ತಯಾರಿಕೆ

## V. ಇಂಜಿನಿಯರಿಂಗ್ ಮತ್ತು ಸಾಂಪ್ರದಾಯಕವಲ್ಲದ ಇಂಧನ

53. ಮರಗೆಲಸ ಮತ್ತು ಕಮ್ಮಾರಿಕೆ

54. ಮನೆ ಬಳಕೆಯ ಅಲ್ಯೂಮಿನಿಯಂ ಪಾತ್ರೆಗಳು

55. ಗೋಬರ್ ಗ್ಯಾಸ್

56. ಗುಂಡುಸೂಜಿ, ಕ್ಲಿಪ್‌ಗಳು, ಸೇಫ್ಟಿ ಪಿನ್, ಸ್ಟೌವ್ ಪಿನ್ ಇತ್ಯಾದಿಗಳ ತಯಾರಿಕೆ

57. ಅಲಂಕಾರಿಕ ಬಲ್ಬ್ ಗಳು, ಶೀಸೆಗಳು, ಗಾಜಿನ ಲೋಟ ಇತ್ಯಾದಿಗಳ ತಯಾರಿಕೆ

58. ಛತ್ರಿ ಜೋಡಣೆ

59. ಸೌರ ಮತ್ತು ಗಾಳಿ ವಿದ್ಯುತ್ ಸಲಕರಣೆಗಳು

60. ಹಿತ್ತಾಳೆಯಿಂದ ಕೈಯಿಂದ ಮಾಡುವ ಪಾತ್ರೆಗಳ ತಯಾರಿಕೆ

61. ತಾಮ್ರದಿಂದ ಕೈಯಿಂದ ತಯಾರಿಸುವ ಪಾತ್ರೆಗಳ ತಯಾರಿಕೆ

62. ಲೋಹದಿಂದ ಕೈಯಿಂದ ತಯಾರಿಸುವ ಪಾತ್ರೆಗಳ ತಯಾರಿಕೆ

63. ಹಿತ್ತಾಳೆ, ತಾಮ್ರ ಮತ್ತು ಗುಂಡು ಲೋಹದಿಂದ ತಯಾರಿಸಿದ ಇತರ ವಸ್ತುಗಳು

64. ರೇಡಿಯೋಗಳ ತಯಾರಿಕೆ

65. ರೇಡಿಯೋಗೆ ಜೋಡಿಸಿದ ಅಥವಾ ಜೋಡಿಸಿರದ ಧ್ವನಿಸುರುಳಿ ಪ್ಲೇಯರ್‌ಗಳ ತಯಾರಿಕೆ

66. ರೇಡಿಯೋಗೆ ಜೋಡಿಸಿದ ಅಥವಾ ಜೋಡಿಸಿರದ ಧ್ವನಿ ಸುರುಳಿ ರೆಕಾರ್ಡರ್‌ಗಳ ತಯಾರಿಕೆ

67. ವೋಲ್ಟೇಜ್ ಸ್ಟಬಿಲೈಸರ್‌ಗಳ ತಯಾರಿಕೆ

68. ಕೆತ್ತನೆ ಮಾಡಿದ ಮರ ಮತ್ತು ಕಲಾತ್ಮಕ ಪೀಠೋಪಕರಣಗಳ ತಯಾರಿಕೆ

69. ತಗಡಿನ ಕೆಲಸ

70. ಮೋಟಾರ್ ವೈಂಡಿಂಗ್

71. ತಂತಿ ಬಲೆಗಳ ತಯಾರಿಕೆ

72. ಕಬ್ಬಿಣದ ಗ್ರಿಲ್‌ಗಳ ತಯಾರಿಕೆ

73. ಕೈಗಾಡಿಗಳು/ ಎತ್ತಿನಗಾಡಿಗಳು/ ಸಣ್ಣ ದೋಣಿಗಳು, ಬೈಸಿಕಲ್ ಜೋಡಣೆ, ಸೈಕಲ್‌ರಿಕ್ಷಾಗಳು, ಮೋಟಾರು ಅಳವಡಿಸಿದ ಗಾಡಿಗಳು ಮುಂತಾದ ಗ್ರಾಮೀಣ ಸಾರಿಗೆ ವಾಹನಗಳ ತಯಾರಿಕೆ

74. ಸಂಗೀತ ವಾದ್ಯಗಳ ತಯಾರಿಕೆ

## VI. ಜವಳಿ ಕೈಗಾರಿಕೆ (ಖಾದಿಯೇತರ)

75. ಪಾಲಿ ವಸ್ತ್ರ

76. ಒಳ ಉಡುಪು

77. ಹೊಲಿಗೆ ಮತ್ತು ಸಿದ್ಧ ಉಡುಪುಗಳನ್ನು ತಯಾರಿಸುವುದು

78. ನೈಲಾನ್ / ಹತ್ತಿನೂಲಿನ ಮೀನಿನ ಬಲೆಗಳನ್ನು ಕೈಯಿಂದ ತಯಾರಿಸುವುದು

79. ಬಾಟಿಕ್ ಕೆಲಸ

80. ಆಟದ ಸಾಮಾನುಗಳು ಮತ್ತು ಬೊಂಬೆ ತಯಾರಿಸುವುದು

81. ದಾರದ ಉಂಡೆಗಳು ಮತ್ತು ಉಣ್ಣೆಯ ದಾರದುಂಡೆ, ಲಡಿಗಳನ್ನು ತಯಾರಿಸುವುದು

82. ಕಸೂತಿ

83. ಶಸ್ತ್ರ ಚಿಕಿತ್ಸಾ ಬ್ಯಾಂಡೇಜುಗಳ ತಯಾರಿಕೆ

84. ಸ್ಟೌವ್ ಬತ್ತಿಗಳ ತಯಾರಿಕೆ

## VII. ಸೇವಾ ಕೈಗಾರಿಕೆ

85. ದೋಬಿ ಕೆಲಸ

86. ಕ್ಷೌರಿಕ

87. ಕೊಳಾಯಿಗಾರಿಕೆ

88. ವಿದ್ಯುತ್ ವೈರಿಂಗ್ ಮತ್ತು ವಿದ್ಯುನ್ಮಾನ ಗೃಹೋಪಯೋಗಿ ಸಲಕರಣೆಗಳು ಮತ್ತು ಉಪಕರಣಗಳ ಸರ್ವೀಸಿಂಗ್

89. ಡೀಸೆಲ್ ಇಂಜಿನ್‌ಗಳು, ಪಂಪ್‌ಸೆಟ್‌ಗಳು, ಇತ್ಯಾದಿಗಳ ದುರಸ್ತಿ

90. ಟೈರ್ ವಲ್ಕನೈಸಿಂಗ್ ಘಟಕ

91. ಸಿಂಪಡಿಸುವ ಸಾಧನಗಳು, ಕೀಟನಾಶಕಗಳು, ಪಂಪ್‌ಸೆಟ್ ಮುಂತಾದವುಗಳಿಗೆ ಕೃಷಿ ಸರ್ವೀಸಿಂಗ್

92. ಧ್ವನಿ ವರ್ಧಕ, ಆಂಪ್ಲಿಫೈಯರ್‌ಗಳು, ಮೈಕ್‌ಗಳು ಮುಂತಾದ ಧ್ವನಿವರ್ಧಕ ಸಾಧನಗಳನ್ನು ಬಾಡಿಗೆಗೆ ಕೊಡುವುದು

93. ಬ್ಯಾಟರಿ ಚಾರ್ಜ್ ಮಾಡುವುದು

94. ಆರ್ಟ್ ಬೋರ್ಡ್ ಪೇಯಿಂಟ್ ಮಾಡುವುದು

95. ಸೈಕಲ್ ದುರಸ್ತಿ ಅಂಗಡಿಗಳು

96. ಕಲ್ಲಿನ ಕೆಲಸ

## VIII. ಗ್ರಾಮೀಣ ವಿದ್ಯುನ್ಮಾನಗಳು

97. (i) ಶ್ರವ್ಯ ಉತ್ಪನ್ನಗಳು

ಉದಾ: ರೇಡಿಯೋಗಳು, ಧ್ವನಿವರ್ಧಕ ಸಾಧನಗಳು, ಟು ಇನ್ ಒನ್‌ಗಳು, ರೆಕಾರ್ಡರುಗಳು

(ii) ದೃಶ್ಯ ಉತ್ಪನ್ನಗಳು

ಉದಾ: ಟಿವಿ ಸೆಟ್‌ಗಳು

(iii) ಉಪ ಜೋಡಣೆಗಳೂ ಸೇರಿ ಇತರ ವಿದ್ಯುನ್ಮಾನ ಉತ್ಪನ್ನಗಳು

ಉದಾ: ಕ್ಯಾಲ್‌ಕುಲೇಟುಗಳು

ವಿದ್ಯುನ್ಮಾನ ಗ್ಯಾಸ್ ಲೈಟರ್‌ಗಳು

ವಿದ್ಯುನ್ಮಾನ ಲಾಟೀನುಗಳು / ಟಾರ್ಚುಗಳು

ವಿದ್ಯುನ್ಮಾನ ಗಡಿಯಾರಗಳು ಮತ್ತು ಅಲಾರಂ ಟೈಂ ಪೀಸ್‌ಗಳು

ವಿದ್ಯುನ್ಮಾನ ಫ್ಯಾನ್ ರೆಗ್ಯುಲೇಟರ್‌ಗಳು

ವೋಲ್ಟೇಜ್ ಸ್ಟಬಿಲೈಸರ್‌ಗಳು

ಆಡಿಯೋ/ ವಿಡಿಯೋ (ಶ್ರವ್ಯ/ ದೃಶ್ಯ) ಟೇಪುಗಳು

ಧ್ವನಿ ವರ್ಧಕಗಳು

ಬ್ಯಾಟರಿ ಎಲಿಮಿನೇಟರುಗಳು

ಆಡಾಪ್ಟರುಗಳು

ಇನ್ವರ್ಟರ್‌ಗಳು, ಕನ್ವರ್ಟರ್‌ಗಳು

ಮೆಕಾನಿಕಲ್ ಟಿ.ವಿ ಟರ್ನರ್‌ಗಳು

ಗ್ಯಾಂಗ್ ಕಂಡೆನ್ಸರ್‌ಗಳು

ಟ್ರಿಮ್ಮರ್ ಕೆಪಾಸಿಟರ್‌ಗಳು

ಆರ್‌ಎಫ್/ ಐಎಫ್ ಕಾಯಿಲುಗಳು][1]

**ಅಧಿಸೂಚನೆಗಳು**

I

**[ಬೆಂಗಳೂರು, ದಿನಾಂಕ 16ನೇ ಸೆಪ್ಟೆಂಬರ್ 1957 (ಸಂ ಸಿಐ 7 ಕೆಎಚ್ ಡಿ 57)]**

ಮೈಸೂರು ಖಾದಿ ಮತ್ತು ಗ್ರಾಮೋದ್ಯೋಗಗಳ ಅಧಿನಿಯಮ, 1956ರ (1957ರ ಮೈಸೂರು ಅಧಿನಿಯಮ 7) 1ನೇ ಪ್ರಕರಣದ (3)ನೇ ಉಪಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಮೈಸೂರು ಸರ್ಕಾರವು, ಸದರಿ ಅಧಿನಿಯಮವು 1957ರ ಸೆಪ್ಟೆಂಬರ್ 18ನೇ ದಿನದಂದು (18.9.1957) ಮುಂಬಯಿ ಪ್ರದೇಶ ಮತ್ತು ಹೈದರಾಬಾದ್ ಪ್ರದೇಶವನ್ನು ಹೊರತುಪಡಿಸಿ, ಇಡೀ ಮೈಸೂರು ರಾಜ್ಯದ ಪ್ರದೇಶದಲ್ಲಿ ಜಾರಿಗೆ ಬರತಕ್ಕದ್ದೆಂದು ನಿರ್ದೇಶಿಸುತ್ತದೆ.

ಮೈಸೂರು ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

**ಎಂ. ವಾಸುದೇವರಾವ್**
ಸರ್ಕಾರದ ಕಾರ್ಯದರ್ಶಿ,
ವಾಣಿಜ್ಯ ಮತ್ತು ಕೈಗಾರಿಕೆಗಳ ಇಲಾಖೆ.

(ದಿನಾಂಕ 16/9/1957ರ ಮೈಸೂರು ರಾಜ್ಯಪತ್ರದ (ವಿಶೇಷ ಸಂಚಿಕೆಯ) ಭಾಗ IV-2.ಸಿ, ಸಂ 273 ರಲ್ಲಿ ಪ್ರಕಟವಾಗಿದೆ.)

## II

**ಬೆಂಗಳೂರು, ದಿನಾಂಕ 3ನೇ ಜೂನ್ 1959 (ಜ್ಯೇಷ್ಠ 13, ಶಕವರ್ಷ 1881)**

**(ಸಂ. ಸಿಐ 31, ಕೆಎಚ್‌ಡಿ 57 (III))**

ಮೈಸೂರು ಖಾದಿ ಮತ್ತು ಗ್ರಾಮೋದ್ಯೋಗಗಳ ಅಧಿನಿಯಮ, 1956ರ (1957ರ ಮೈಸೂರು ಅಧಿನಿಯಮ 7) 1ನೇ ಪ್ರಕರಣದ (3)ನೇ ಉಪಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಮೈಸೂರು ಸರ್ಕಾರವು, 1959ರ ಫೆಬ್ರವರಿ 15ನೇ ದಿನವನ್ನು ಸದರಿ ಅಧಿನಿಯಮವು ಮುಂಬಯಿ ಪ್ರದೇಶದಲ್ಲಿ ಜಾರಿಗೆ ಬರತಕ್ಕ ದಿನಾಂಕವೆಂದು ಈ ಮೂಲಕ ನಿರ್ದಿಷ್ಟಪಡಿಸಿದೆ.

ಮೈಸೂರು ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

**ಬಿ. ಎಂ. ಅಬೂಬಕರ್**
ಸರ್ಕಾರದ ಕಾರ್ಯದರ್ಶಿ,
ವಾಣಿಜ್ಯ ಮತ್ತು ಕೈಗಾರಿಕೆಗಳ ಇಲಾಖೆ.

(1959ರ ರಾಜ್ಯ ಮತ್ತು ಕೇಂದ್ರ ಅಧಿನಿಯಮಗಳ ಮೇರೆಗೆ ಸರ್ಕಾರವು ಮಾಡಿದ ಶಾಸನಬದ್ಧ ನಿಯಮಗಳು, ಆದೇಶಗಳು ಮತ್ತು ಅಧಿಸೂಚನೆಗಳ ಸಂಕಲನದಿಂದ ಪಡೆದಿದೆ.)

## III

**ಬೆಂಗಳೂರು, ದಿನಾಂಕ 28ನೇ ಆಗಸ್ಟ್ 1959 (ಭಾದ್ರಪದ 6, ಶಕವರ್ಷ 1881)**

**(ಸಂ. ಸಿಐ 31 ಕೆಎಚ್‌ಡಿ 57 (III))**

ಮೈಸೂರು ಖಾದಿ ಮತ್ತು ಗ್ರಾಮೋದ್ಯೋಗಗಳ ಅಧಿನಿಯಮ, 1956ರ (1957ರ ಮೈಸೂರು ಅಧಿನಿಯಮ 7) 1ನೇ ಪ್ರಕರಣದ (3)ನೇ ಉಪಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಮೈಸೂರು ಸರ್ಕಾರವು, 1959ರ ಆಗಸ್ಟ್ 1ನೇ ದಿನವನ್ನು ಸದರಿ ಅಧಿನಿಯಮವು ಹೈದರಾಬಾದ್ ಪ್ರದೇಶದಲ್ಲಿ ಜಾರಿಗೆ ಬರತಕ್ಕ ದಿನಾಂಕವೆಂದು ಈ ಮೂಲಕ ನಿರ್ದಿಷ್ಟಪಡಿಸಿದೆ.

ಮೈಸೂರು ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

**ಬಿ. ಎಂ. ಅಬೂಬಕರ್**
ಸರ್ಕಾರದ ಕಾರ್ಯದರ್ಶಿ,
ವಾಣಿಜ್ಯ ಮತ್ತು ಕೈಗಾರಿಕೆಗಳ ಇಲಾಖೆ.

**IV**

**ಬೆಂಗಳೂರು, ದಿನಾಂಕ 6ನೇ ಆಗಸ್ಟ್ 1990, [ಸಂ. ಸಿಐ 67 ಎಸ್‌ಎಲ್‌ವಿ 89]**

**ಎಸ್‌ಒ 679.–** ಕರ್ನಾಟಕ ಖಾದಿ ಮತ್ತು ಗ್ರಾಮೋದ್ಯೋಗಗಳ ಅಧಿನಿಯಮ, 1956ರ (1957ರ ಕರ್ನಾಟಕ ಅಧಿನಿಯಮ 7) 33ನೇ ಪ್ರಕರಣದ (1)ನೇ ಉಪಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಈ ಮೂಲಕ, ಸದರಿ ಅಧಿನಿಯಮದ ಅನುಸೂಚಿಯ ಕೆಲವು ಬಾಬುಗಳನ್ನು ಮರು ವರ್ಗೀಕರಿಸಲು ಅದರ ಅನುಸೂಚಿಯನ್ನು ಈ ಮುಂದಿನಂತೆ ಮತ್ತಷ್ಟು ಮಾರ್ಪಾಟುಗೊಳಿಸಿದೆ:–

ಕರ್ನಾಟಕ ಖಾದಿ ಮತ್ತು ಗ್ರಾಮೋದ್ಯೋಗಗಳ ಅಧಿನಿಯಮ, 1958ರ (1957ರ ಕರ್ನಾಟಕ ಅಧಿನಿಯಮ 7) ಈಗಿರುವ ಅನುಸೂಚಿಯಲ್ಲಿ ಈ ಕೆಳಕಂಡ ಕೆಲವು ಸೇರ್ಪಡೆಗಳನ್ನು ಮಾಡುವ ಮೂಲಕ ಮರುವರ್ಗೀಕರಿಸಲಾಗಿದೆ:–

**ಟಿಪ್ಪಣಿ:** ಅಧಿನಿಯಮದಲ್ಲಿರುವಂಥ ಅನುಸೂಚಿ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

**ಎಸ್.ಜಿ. ಪ್ರಭು**
ಸರ್ಕಾರದ ಕಾರ್ಯದರ್ಶಿ,
ವಾಣಿಜ್ಯ ಮತ್ತು ಕೈಗಾರಿಕೆಗಳ ಇಲಾಖೆ (ಎಸ್‌ಎಸ್‌ಐ ಶಾಖೆ)

The above translation of the Karnataka Khadi and Village Industries Act 1956 (7 of 1957) shall be authoritative text in the Kannada Language under section 5A of the Karnataka Official Language Act, 1963

Governor of Karnataka

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು
ಅವರ ಹೆಸರಿನಲ್ಲಿ,

ಪಿ.ಆರ್. 1337

**ಜಿ.ಕೆ. ಬೋರೇಗೌಡ**
ಸರ್ಕಾರದ ಕಾರ್ಯದರ್ಶಿ,
ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನಾ ಇಲಾಖೆ.